# ನಮ್ಮ ಸೇವೆಗಳನ್ನು ನೀವು ಬಳಸುವಾಗ, ನಿಮ್ಮ ಮಾಹಿತಿಯನ್ನು ನಾವು ಸುರಕ್ಷಿತವಾಗಿರಿಸುತ್ತೇವೆ ಎಂದು ನೀವು ನಮ್ಮ ಮೇಲೆ ವಿಶ್ವಾಸವಿರಿಸುತ್ತೀರಿ. ನಮಗೆ ಇದು ದೊಡ್ಡ ಜವಾಬ್ದಾರಿ ಎಂದು ಅರಿವಿದೆ ಮತ್ತು ನಿಮ್ಮ ಮಾಹಿತಿಯನ್ನು ಸಂರಕ್ಷಿಸಲು ಹಾಗೂ ಅದರ ನಿಯಂತ್ರಣವನ್ನು ನಿಮಗೆ ಕೊಡಲು ನಾವು ಶ್ರಮವಹಿಸಿ ಕೆಲಸ ಮಾಡುತ್ತೇವೆ.

ನಾವು ಯಾವ ಮಾಹಿತಿಯನ್ನು ಸಂಗ್ರಹಿಸುತ್ತೇವೆ, ಅದನ್ನು ನಾವು ಏಕೆ ಸಂಗ್ರಹಿಸುತ್ತೇವೆ ಮತ್ತು ನಿಮ್ಮ ಮಾಹಿತಿಯನ್ನು ನೀವು ಹೇಗೆ ಅಪ್‌ಡೇಟ್ ಮಾಡಬಹುದು, ನಿರ್ವಹಿಸಬಹುದು, ರಫ್ತು ಮಾಡಬಹುದು ಮತ್ತು ಅಳಿಸಬಹುದು ಎನ್ನುವುದನ್ನು ಅರ್ಥಮಾಡಿಕೊಳ್ಳುವಲ್ಲಿ ನಿಮಗೆ ಸಹಾಯ ಮಾಡುವುದು ಈ ಗೌಪ್ಯತೆ ನೀತಿಯ ಉದ್ದೇಶವಾಗಿದೆ.

ಗೌಪ್ಯತೆ ಪರಿಶೀಲನೆ

ನಿಮ್ಮ ಗೌಪ್ಯತೆ ಸೆಟ್ಟಿಂಗ್‌ಗಳನ್ನು ಬದಲಾಯಿಸಲು ನೋಡುತ್ತಿರುವಿರಾ?

ಗೌಪ್ಯತೆ ಪರಿಶೀಲನೆ ಕೈಗೊಳ್ಳಿ

---

ಜಾರಿಗೊಳ್ಳುವುದು ಆಗಸ್ಟ್ 28, 2020

ಆರ್ಕೈವ್ ಮಾಡಿರುವ ಆವೃತ್ತಿಗಳು

---

ಜನರು ಜಗತ್ತನ್ನು ಹೊಸ ರೀತಿಯಲ್ಲಿ ಅನ್ವೇಷಿಸಲು ಮತ್ತು ಇತರರೊಂದಿಗೆ ಸಂವಹಿಸಲು ಸಹಾಯ ಮಾಡುವಂತಹ, ವೈವಿಧ್ಯಮಯ ಸೇವೆಗಳನ್ನು ನಾವು ನಿರ್ಮಿಸುತ್ತಿದ್ದೇವೆ. ನಮ್ಮ ಸೇವೆಗಳಲ್ಲಿ ಇವು ಸೇರಿವೆ:

- ಹುಡುಕಾಟ, YouTube ಮತ್ತು Google Home ನಂತಹ Google ಅಪ್ಲಿಕೇಶನ್‌ಗಳು, ಸೈಟ್‌ಗಳು ಮತ್ತು ಸಾಧನಗಳು
- Chrome ಬ್ರೌಸರ್ ಹಾಗೂ Android ಆಪರೇಟಿಂಗ್ ಸಿಸ್ಟಮ್‌ನಂತಹ ಪ್ಲಾಟ್‌ಫಾರ್ಮ್‌ಗಳು
- ಜಾಹೀರಾತುಗಳು ಮತ್ತು ಎಂಬೆಡ್ ಮಾಡಿರುವ Google Maps ಗಳಂತೆ, ಥರ್ಡ್-ಪಾರ್ಟಿ ಅಪ್ಲಿಕೇಶನ್ಗಳು ಮತ್ತು ಸೈಟ್ಗಳಲ್ಲಿ ಅಳವಡಿಸಿರುವಂತಹ ಉತ್ಪನ್ನಗಳು

ನಿಮ್ಮ ಗೌಪ್ಯತೆಯನ್ನು ನಿರ್ವಹಿಸಲು, ನಮ್ಮ ಸೇವೆಗಳನ್ನು ನೀವು ವಿವಿಧ ರೀತಿಗಳಲ್ಲಿ ಬಳಸಬಹುದು. ಉದಾಹರಣೆಗೆ, ನೀವು ಇಮೇಲ್ಗಳು ಮತ್ತು ಫೋಟೋಗಳಂತಹ ವಿಷಯವನ್ನು ರಚಿಸಲು ಅಥವಾ ನಿರ್ವಹಿಸಲು ಬಯಸುವಿರಾದರೆ ಅಥವಾ ಹೆಚ್ಚು ಸೂಕ್ತವಾದ ಹುಡುಕಾಟ ಫಲಿತಾಂಶಗಳನ್ನು ನೋಡಲು ಬಯಸುತ್ತೀರಾದರೆ, ನೀವು Google ಖಾತೆಗೆ ಸೈನ್ ಅಪ್ ಮಾಡಬಹುದು. ಮತ್ತು, ನೀವು ಖಾತೆಯಿಂದ ಸೈನ್ ಔಟ್ ಆಗಿರುವಾಗ ಅಥವಾ ಖಾತೆಯನ್ನು ರಚಿಸದೆಯೂ ಸಹ, Google ನಲ್ಲಿ ಹುಡುಕುವುದು ಅಥವಾ YouTube ವೀಡಿಯೊಗಳನ್ನು ವೀಕ್ಷಿಸುವಂತಹ ಹಲವಾರು Google ಸೇವೆಗಳನ್ನು ಬಳಸಬಹುದು. Chrome ಅನ್ನು ಇನ್‌ಕಾಗ್ನಿಟೋ ಮೋಡ್ನಲ್ಲಿ ಬಳಸುವ ಮೂಲಕ, ನೀವು ವೆಬ್ ಅನ್ನು ಖಾಸಗಿಯಾಗಿ ಕೂಡಾ ಬ್ರೌಸ್ ಮಾಡಬಹುದು. ಮತ್ತು ನಮ್ಮ

ಸೇವೆಗಳಾದ್ಯಂತ, ನಾವು ಯಾವ ಮಾಹಿತಿಯನ್ನು ಸಂಗ್ರಹಿಸುತ್ತೇವೆ ಮತ್ತು ನಿಮ್ಮ ಮಾಹಿತಿಯನ್ನು ಹೇಗೆ ಬಳಸುತ್ತೇವೆ ಎಂಬುದನ್ನು ನಿಯಂತ್ರಿಸಲು, ನಿಮ್ಮ ಗೌಪ್ಯತೆ ಸೆಟ್ಟಿಂಗ್‌ಗಳಲ್ಲಿ ನೀವು ಹೊಂದಾಣಿಕೆ ಮಾಡಬಹುದು.

ವಿಷಯಗಳನ್ನು ಸಾಧ್ಯವಾದಷ್ಟು ಸ್ಪಷ್ಟವಾಗಿ ವಿವರಿಸಲು ನೆರವಾಗುವಂತೆ, ನಾವು ಪ್ರಮುಖ ಪದಗಳಿಗಾಗಿ ಉದಾಹರಣೆಗಳು, ವಿವರಣಾತ್ಮಕ ವೀಡಿಯೊಗಳು ಹಾಗೂ ವ್ಯಾಖ್ಯಾನಗಳನ್ನು ಸೇರಿಸಿದ್ದೇವೆ. ಮತ್ತು ಈ ಗೌಪ್ಯತೆ ನೀತಿಯ ಕುರಿತು ನಿಮ್ಮಲ್ಲಿ ಪ್ರಶ್ನೆಗಳಿದ್ದರೆ, ನೀವು ನಮ್ಮನ್ನು ಸಂಪರ್ಕಿಸಬಹುದು.

---

GOOGLE ಸಂಗ್ರಹಿಸುವ ಮಾಹಿತಿ

# ನಮ್ಮ ಸೇವೆಗಳನ್ನು ನೀವು ಬಳಸುವಾಗ, ನಾವು ಯಾವ ರೀತಿಯ ಮಾಹಿತಿಯನ್ನು ಸಂಗ್ರಹಿಸುತ್ತೇವೆ ಎಂಬುದನ್ನು ನೀವು ಅರ್ಥಮಾಡಿಕೊಳ್ಳಬೇಕೆಂದು ನಾವು ಬಯಸುತ್ತೇವೆ

ನಮ್ಮ ಎಲ್ಲಾ ಬಳಕೆದಾರರಿಗೆ ಉತ್ತಮ ಸೇವೆಗಳನ್ನು ಒದಗಿಸುವುದಕ್ಕಾಗಿ – ನೀವು ಯಾವ ಭಾಷೆಯಲ್ಲಿ ಮಾತನಾಡುತ್ತೀರಿ ಎಂಬಂತಹ ಪ್ರಾಥಮಿಕ ಅಂಶಗಳಿಂದ ಹಿಡಿದು, ನಿಮಗೆ ಹೆಚ್ಚು ಉಪಯುಕ್ತವಾಗುವ ಜಾಹೀರಾತುಗಳು ಯಾವುವು, ನೀವು ಆನ್‌ಲೈನ್‌ನಲ್ಲಿ ಹೆಚ್ಚು ಮಹತ್ವ ನೀಡುವ ವ್ಯಕ್ತಿಗಳು ಯಾರು ಅಥವಾ ನಿಮಗೆ ಯಾವ YouTube ವೀಡಿಯೊಗಳು ಇಷ್ಟವಾಗಬಹುದು ಎಂಬಂತಹ ಹೆಚ್ಚು ಸಂಕೀರ್ಣ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನಾವು ಸಂಗ್ರಹಿಸುತ್ತೇವೆ. Google ಯಾವ ಮಾಹಿತಿಯನ್ನು ಸಂಗ್ರಹಿಸುತ್ತದೆ ಮತ್ತು ಆ ಮಾಹಿತಿಯನ್ನು ಹೇಗೆ ಬಳಸುತ್ತದೆ ಎಂಬುದು, ನಮ್ಮ ಸೇವೆಗಳನ್ನು ನೀವು ಹೇಗೆ ಬಳಸುತ್ತೀರಿ ಮತ್ತು ನಿಮ್ಮ ಗೌಪ್ಯತೆ ನಿಯಂತ್ರಣಗಳನ್ನು ನೀವು ಹೇಗೆ ನಿರ್ವಹಿಸುತ್ತೀರಿ ಎಂಬ ಅಂಶಗಳನ್ನು ಅವಲಂಬಿಸಿರುತ್ತದೆ.

ಒಂದು ವೇಳೆ ನೀವು Google ಖಾತೆಗೆ ಸೈನ್ ಇನ್ ಮಾಡದಿದ್ದರೆ, ನಾವು ಸಂಗ್ರಹಿಸುವ ಮಾಹಿತಿಯನ್ನು ನೀವು ಬಳಸುತ್ತಿರುವ ಬ್ರೌಸರ್, ಅಪ್ಲಿಕೇಶನ್ ಅಥವಾ ಸಾಧನಕ್ಕೆ ಸಂಬಂಧಪಟ್ಟ ಅನನ್ಯ ಗುರುತುಗಳ ಜೊತೆಗೆ ಸಂಗ್ರಹಣೆ ಮಾಡುತ್ತೇವೆ. ಬ್ರೌಸಿಂಗ್ ಸೆಶನ್‌ಗಳಾದ್ಯಂತ ನಿಮ್ಮ ಭಾಷಾ ಆದ್ಯತೆಗಳನ್ನು ಕಾಯ್ದುಕೊಳ್ಳುವಂತಹ ವಿಷಯಗಳಲ್ಲಿ ಇದು ನಮಗೆ ನೆರವಾಗುತ್ತದೆ.

ನೀವು ಸೈನ್ ಇನ್ ಮಾಡಿರುವಾಗ, ನಾವು ಕೆಲವೊಂದು ಮಾಹಿತಿಯನ್ನು ಕೂಡಾ ಸಂಗ್ರಹಿಸಿ ನಿಮ್ಮ Google ಖಾತೆಯ ಜೊತೆಗೆ ಸಂಗ್ರಹಣೆ ಮಾಡುತ್ತೇವೆ. ಇದನ್ನು ನಾವು ವೈಯಕ್ತಿಕ ಮಾಹಿತಿ ಎಂದು ಪರಿಗಣಿಸುತ್ತೇವೆ.

## ನೀವು ರಚಿಸುವ ಅಥವಾ ನಮಗೆ ಒದಗಿಸುವ ಸಂಗತಿಗಳು

ನೀವು Google ಖಾತೆಯನ್ನು ರಚಿಸಿದಾಗ, ನಿಮ್ಮ ಹೆಸರು ಮತ್ತು ಪಾಸ್‌ವರ್ಡ್ ಅನ್ನು ಒಳಗೊಂಡ ವೈಯಕ್ತಿಕ ಮಾಹಿತಿಯನ್ನು ನೀವು ನಮಗೆ ಒದಗಿಸುತ್ತೀರಿ. ನಿಮ್ಮ ಖಾತೆಗೆ ಫೋನ್ ಸಂಖ್ಯೆ ಅಥವಾ ಪಾವತಿ ಮಾಹಿತಿಯನ್ನು ಸೇರಿಸಲು ಸಹ ನೀವು ಆಯ್ಕೆ ಮಾಡಿಕೊಳ್ಳಬಹುದು. ನೀವು Google ಖಾತೆಗೆ ಸೈನ್ ಇನ್ ಮಾಡದಿದ್ದರೂ, ನಮ್ಮ ಸೇವೆಗಳ ಕುರಿತು ಅಪ್‌ಡೇಟ್‌ಗಳನ್ನು ಪಡೆದುಕೊಳ್ಳಲು, ನಿಮ್ಮ ಇಮೇಲ್ ವಿಳಾಸದಂತಹ ಮಾಹಿತಿಯನ್ನು ನಮಗೆ ಒದಗಿಸಲು ನೀವು ಆಯ್ಕೆ ಮಾಡಬಹುದು.

ನಮ್ಮ ಸೇವೆಗಳನ್ನು ಬಳಸುವಾಗ ನೀವು ರಚಿಸುವ, ಅಪ್‌ಲೋಡ್ ಮಾಡುವ ಅಥವಾ ಇತರರಿಂದ ಪಡೆಯುವ ವಿಷಯವನ್ನು ಕೂಡಾ ನಾವು ಸಂಗ್ರಹಿಸುತ್ತೇವೆ. ನೀವು ಬರೆಯುವ ಮತ್ತು ಸ್ವೀಕರಿಸುವ ಇಮೇಲ್, ನೀವು ಉಳಿಸುವ ಫೋಟೋಗಳು ಮತ್ತು ವೀಡಿಯೊಗಳು,

ನೀವು ರಚಿಸುವ ಡಾಕ್ಯುಮೆಂಟ್‌ಗಳು ಮತ್ತು ಸ್ಪ್ರೆಡ್‌ಶೀಟ್‌ಗಳು ಹಾಗೂ YouTube ವೀಡಿಯೊಗಳ ಕುರಿತು ನೀವು ಮಾಡುವ ಕಾಮೆಂಟ್‌ಗಳಂತಹ ವಿಷಯಗಳು ಇದರಲ್ಲಿ ಸೇರಿರುತ್ತವೆ.

# ನಮ್ಮ ಸೇವೆಗಳನ್ನು ನೀವು ಬಳಸುವಾಗ ನಾವು ಸಂಗ್ರಹಿಸುವ ಮಾಹಿತಿ

## ನಿಮ್ಮ ಅಪ್ಲಿಕೇಶನ್‌ಗಳು, ಬ್ರೌಸರ್‌ಗಳು ಹಾಗೂ ಸಾಧನಗಳು

Google ಸೇವೆಗಳಿಗೆ ಪ್ರವೇಶಪಡೆಯಲು ನೀವು ಬಳಸುವ ಅಪ್ಲಿಕೇಶನ್‌ಗಳು, ಬ್ರೌಸರ್‌ಗಳು ಮತ್ತು ಸಾಧನಗಳ ಕುರಿತು ನಾವು ಮಾಹಿತಿ ಸಂಗ್ರಹಿಸುತ್ತೇವೆ. ಸ್ವಯಂಚಾಲಿತ ಉತ್ಪನ್ನ ಅಪ್‌ಡೇಟ್‌ಗಳನ್ನು ಒದಗಿಸಲು ಮತ್ತು ನಿಮ್ಮ ಸಾಧನದ ಬ್ಯಾಟರಿ ಕಡಿಮೆಯಿದ್ದರೆ, ನಿಮ್ಮ ಪರದೆಯನ್ನು ಮಂಕಾಗಿಸುವಂತಹ ವೈಶಿಷ್ಟ್ಯಗಳನ್ನು ಒದಗಿಸಲು ಇದು ನಮಗೆ ಸಹಾಯ ಮಾಡುತ್ತದೆ.

ನಾವು ಸಂಗ್ರಹಿಸುವ ಮಾಹಿತಿಯಲ್ಲಿ ಅನನ್ಯ ಗುರುತುಗಳು, ಬ್ರೌಸರ್ ವಿಧ ಮತ್ತು ಸೆಟ್ಟಿಂಗ್‌ಗಳು, ಸಾಧನದ ವಿಧ ಮತ್ತು ಸೆಟ್ಟಿಂಗ್‌ಗಳು, ಆಪರೇಟಿಂಗ್ ಸಿಸ್ಟಮ್, ಕೆರಿಯರ್ ಹೆಸರು ಮತ್ತು ಫೋನ್ ಸಂಖ್ಯೆ ಸೇರಿದಂತೆ ಮೊಬೈಲ್ ನೆಟ್‌ವರ್ಕ್ ಮಾಹಿತಿ ಮತ್ತು ಅಪ್ಲಿಕೇಶನ್ ಆವೃತ್ತಿಯ ಸಂಖ್ಯೆಯು ಸೇರಿರುತ್ತದೆ. IP ವಿಳಾಸ, ಕ್ರ್ಯಾಶ್ ವರದಿಗಳು, ಸಿಸ್ಟಮ್ ಚಟುವಟಿಕೆ ಮತ್ತು ನಿಮ್ಮ ಕೋರಿಕೆಯ ದಿನಾಂಕ, ಸಮಯ ಹಾಗೂ ರೆಫರಲ್ ಮಾಡುವವರ URL ಸೇರಿದಂತೆ, ನಿಮ್ಮ ಅಪ್ಲಿಕೇಶನ್‌ಗಳು, ಬ್ರೌಸರ್‌ಗಳು ಮತ್ತು ಸಾಧನಗಳು ನಮ್ಮ ಸೇವೆಗಳೊಂದಿಗೆ ಹೇಗೆ ಸಂವಹಿಸುತ್ತವೆ ಎಂಬ ಕುರಿತಾದ ಮಾಹಿತಿಯನ್ನು ಕೂಡಾ ನಾವು ಸಂಗ್ರಹಿಸುತ್ತೇವೆ.

ನಿಮ್ಮ ಸಾಧನದಲ್ಲಿನ Google ಸೇವೆಯು ನಮ್ಮ ಸರ್ವರ್‌ಗಳನ್ನು ಸಂಪರ್ಕಿಸಿದಾಗ ನಾವು ಈ ಮಾಹಿತಿಯನ್ನು ಸಂಗ್ರಹಿಸುತ್ತೇವೆ – ಉದಾಹರಣೆಗೆ, ನೀವು Play Store ನಿಂದ ಒಂದು ಅಪ್ಲಿಕೇಶನ್ ಅನ್ನು ಇನ್‌ಸ್ಟಾಲ್ ಮಾಡಿದಾಗ ಅಥವಾ ಒಂದು ಸೇವೆಯು ಸ್ವಯಂಚಾಲಿತ ಅಪ್‌ಡೇಟ್‌ಗಳಿಗಾಗಿ ಪರಿಶೀಲಿಸುವಂತಹ ಸಂದರ್ಭಗಳು. ನೀವು Google ಅಪ್ಲಿಕೇಶನ್‌ಗಳನ್ನು ಹೊಂದಿರುವ Android ಸಾಧನವನ್ನು ಬಳಸುತ್ತಿದ್ದರೆ, ನಿಮ್ಮ ಸಾಧನ ಹಾಗೂ ನಮ್ಮ ಸೇವೆಗಳಿಗೆ ಸಂಪರ್ಕದ ಕುರಿತಾಗಿ ಮಾಹಿತಿ ಒದಗಿಸುವುದಕ್ಕಾಗಿ ನಿಮ್ಮ ಸಾಧನವು ನಿಯತಕಾಲಿಕವಾಗಿ Google ಸರ್ವರ್‌ಗಳನ್ನು ಸಂಪರ್ಕಿಸುತ್ತದೆ. ನಿಮ್ಮ ಸಾಧನದ ವಿಧ, ವಾಹಕದ ಹೆಸರು, ಕ್ರ್ಯಾಶ್ ವರದಿಗಳು ಮತ್ತು ನೀವು ಇನ್‌ಸ್ಟಾಲ್ ಮಾಡಿರುವ ಅಪ್ಲಿಕೇಶನ್‌ಗಳಂತಹ ಮಾಹಿತಿಯು ಇದರಲ್ಲಿ ಸೇರಿರುತ್ತದೆ.

## ನಿಮ್ಮ ಚಟುವಟಿಕೆ

ನಮ್ಮ ಸೇವೆಗಳಲ್ಲಿ ನೀವು ಮಾಡುವ ಚಟುವಟಿಕೆಯ ಕುರಿತು ನಾವು ಮಾಹಿತಿಯನ್ನು ಸಂಗ್ರಹಿಸುತ್ತೇವೆ. ನಿಮಗೆ ಇಷ್ಟವಾಗಬಹುದಾದ YouTube ವೀಡಿಯೊವನ್ನು ಶಿಫಾರಸು ಮಾಡುವಂತಹ ಕೆಲಸಗಳಿಗಾಗಿ ನಾವು ಇದನ್ನು ಬಳಸುತ್ತೇವೆ. ನಾವು ಸಂಗ್ರಹಿಸುವ ಚಟುವಟಿಕೆ ಮಾಹಿತಿಯಲ್ಲಿ ಇವು ಸೇರಿರಬಹುದು:

- ನೀವು ಹುಡುಕುವ ಪದಗಳು
- ನೀವು ವೀಕ್ಷಿಸುವ ವೀಡಿಯೊಗಳು
- ವಿಷಯ ಮತ್ತು ಜಾಹೀರಾತುಗಳ ವೀಕ್ಷಣೆಗಳು ಮತ್ತು ಅವುಗಳೊಂದಿಗಿನ ಸಂವಹನಗಳು
- ನೀವು ಆಡಿಯೊ ವೈಶಿಷ್ಟ್ಯಗಳನ್ನು ಬಳಸುವಾಗ, ಧ್ವನಿ ಮತ್ತು ಆಡಿಯೋ ಮಾಹಿತಿ

- ಖರೀದಿ ಚಟುವಟಿಕೆ
- ನೀವು ಸಂವಹಿಸುವ ಅಥವಾ ವಿಷಯವನ್ನು ಹಂಚಿಕೊಳ್ಳುವ ಜನರು
- ನಮ್ಮ ಸೇವೆಗಳನ್ನು ಬಳಸುವ ಥರ್ಡ್-ಪಾರ್ಟಿ ಸೈಟ್‌ಗಳು ಮತ್ತು ಅಪ್ಲಿಕೇಶನ್‌ಗಳಲ್ಲಿನ ಚಟುವಟಿಕೆ
- ನಿಮ್ಮ Google ಖಾತೆಯೊಂದಿಗೆ ನೀವು ಸಿಂಕ್ ಮಾಡಿರುವ Chrome ಬ್ರೌಸಿಂಗ್ ಇತಿಹಾಸ

ಕರೆ ಮಾಡಲು ಮತ್ತು ಸ್ವೀಕರಿಸಲು ಅಥವಾ ಸಂದೇಶಗಳನ್ನು ಕಳುಹಿಸಲು ಅಥವಾ ಸ್ವೀಕರಿಸಲು ನಮ್ಮ ಸೇವೆಗಳನ್ನು ನೀವು ಬಳಸಿದರೆ, ನಿಮ್ಮ ಫೋನ್ ಸಂಖ್ಯೆ, ಕರೆ ಮಾಡುವವರ ಸಂಖ್ಯೆ, ಕರೆ ಸ್ವೀಕರಿಸುವವರ ಫೋನ್ ಸಂಖ್ಯೆ, ಫಾರ್ವರ್ಡ್ ಮಾಡುವ ಸಂಖ್ಯೆಗಳು, ಕರೆಗಳು ಮತ್ತು ಸಂದೇಶಗಳ ಸಮಯ ಹಾಗೂ ದಿನಾಂಕ, ಕರೆಯ ಅವಧಿ, ರೂಟಿಂಗ್ ಮಾಹಿತಿ ಮತ್ತು ಕರೆಗಳ ವಿಧಗಳಂತಹ ದೂರವಾಣಿ ಲಾಗ್ ಮಾಹಿತಿಯನ್ನು ನಾವು ಸಂಗ್ರಹಿಸಬಹುದು.

ನಿಮ್ಮ ಖಾತೆಯಲ್ಲಿ ಉಳಿಸಿರುವ ಚಟುವಟಿಕೆ ಮಾಹಿತಿಯನ್ನು ಹುಡುಕಲು ಮತ್ತು ನಿರ್ವಹಿಸಲು, ನಿಮ್ಮ Google ಖಾತೆಗೆ ನೀವು ಭೇಟಿ ನೀಡಬಹುದು.

---

Google ಖಾತೆಗೆ ಹೋಗಿ

---

## ನಿಮ್ಮ ಸ್ಥಳದ ಮಾಹಿತಿ

ನಮ್ಮ ಸೇವೆಗಳನ್ನು ನೀವು ಬಳಸುವಾಗ, ನಿಮ್ಮ ಸ್ಥಳದ ಕುರಿತು ನಾವು ಮಾಹಿತಿಯನ್ನು ಸಂಗ್ರಹಿಸುತ್ತೇವೆ. ನಿಮ್ಮ ವಾರಾಂತ್ಯದ ವಿಹಾರಕ್ಕಾಗಿ ನಿಮಗೆ ಡ್ರೈವಿಂಗ್ ನಿರ್ದೇಶನಗಳನ್ನು ನೀಡುವುದು ಅಥವಾ ನಿಮ್ಮ ಸಮೀಪ ಪ್ಲೇ ಆಗುತ್ತಿರುವ ಚಲನಚಿತ್ರಗಳ ಪ್ರದರ್ಶನದ ಸಮಯಗಳನ್ನು ತಿಳಿಸುವಂತಹ ವೈಶಿಷ್ಟ್ಯಗಳನ್ನು ಒದಗಿಸಲು ಇದು ನಮಗೆ ಸಹಾಯ ಮಾಡುತ್ತದೆ.

ಈ ಕೆಳಗಿನ ವಿಧಗಳ ಮೂಲಕ, ನಿಮ್ಮ ಸ್ಥಳವನ್ನು ವಿವಿಧ ಸ್ತರಗಳ ನಿಖರತೆಯೊಂದಿಗೆ ನಿರ್ಧರಿಸಬಹುದು:

- GPS
- IP ವಿಳಾಸ
- ನಿಮ್ಮ ಸಾಧನದ ಸೆನ್ಸರ್ ಡೇಟಾ
- ನಿಮ್ಮ ಸಾಧನದ ಸಮೀಪದಲ್ಲಿರುವ ಸಂಗತಿಗಳ ಕುರಿತು ಮಾಹಿತಿ, ಉದಾಹರಣೆಗೆ ವೈ-ಫೈ ಆಕ್ಸೆಸ್ ಪಾಯಿಂಟ್‌ಗಳು, ಸೆಲ್ ಟವರ್‌ಗಳು ಮತ್ತು ಬ್ಲೂಟೂತ್-ಸಕ್ರಿಯ ಸಾಧನಗಳು

ನಾವು ಸಂಗ್ರಹಿಸುವ ಸ್ಥಳ ಡೇಟಾದ ಪ್ರಕಾರಗಳು ನಿಮ್ಮ ಸಾಧನ ಮತ್ತು ಖಾತೆಯ ಸೆಟ್ಟಿಂಗ್‌ಗಳನ್ನು ಭಾಗಶಃ ಅವಲಂಬಿಸಿರುತ್ತವೆ. ಉದಾಹರಣೆಗೆ, ಸಾಧನದ ಸೆಟ್ಟಿಂಗ್‌ಗಳ ಆ್ಯಪ್ ಬಳಸಿಕೊಂಡು ನಿಮ್ಮ Android ಸಾಧನದ ಸ್ಥಳವನ್ನು ಆನ್ ಅಥವಾ ಆಫ್

ಮಾಡಬಹುದು. ನಿಮ್ಮ ಸೈನ್ ಇನ್ ಮಾಡಿರುವ ಸಾಧನಗಳ ಸಹಾಯದಿಂದ ನೀವೆಲ್ಲಿಗೆ ಹೋಗುವಿರೋ ಆ ಸ್ಥಳದ ಖಾಸಗಿ ನಕ್ಷೆಯನ್ನು ರಚಿಸಲು ನೀವು ಬಯಸುವುದಾದರೆ, ಸ್ಥಳ ಇತಿಹಾಸವನ್ನು ಸಹ ನೀವು ಆನ್ ಮಾಡಬಹುದು.

---

ಕೆಲವೊಂದು ಸಂದರ್ಭಗಳಲ್ಲಿ, ಸಾರ್ವಜನಿಕವಾಗಿ ಪ್ರವೇಶಿಸಬಹುದಾದ ಮೂಲಗಳಿಂದ ಸಹ Google ನಿಮ್ಮ ಕುರಿತಾದ ಮಾಹಿತಿಯನ್ನು ಸಂಗ್ರಹಿಸುತ್ತದೆ. ಉದಾಹರಣೆಗೆ, ನಿಮ್ಮ ಸ್ಥಳೀಯ ದಿನಪತ್ರಿಕೆಯಲ್ಲಿ ನಿಮ್ಮ ಹೆಸರು ಕಾಣಿಸಿಕೊಂಡರೆ, Google ನ ಸರ್ಚ್ ಎಂಜಿನ್, ಆ ಲೇಖನದ ಸೂಚಿ ಮಾಡಿಟ್ಟುಕೊಳ್ಳಬಹುದು ಮತ್ತು ಇತರರು ನಿಮ್ಮ ಹೆಸರನ್ನು ಹುಡುಕುವಾಗ, ಅದನ್ನು ಅವರಿಗೆ ತೋರಿಸಬಹುದು. ನಮ್ಮ ವ್ಯಾಪಾರ ಸೇವೆಗಳ ಸಂಭಾವ್ಯ ಗ್ರಾಹಕರ ಕುರಿತು ನಮಗೆ ಮಾಹಿತಿ ನೀಡುವ ಮಾರ್ಕೆಟಿಂಗ್ ಪಾಲುದಾರರು ಮತ್ತು ದುರ್ಬಳಕೆಯ ವಿರುದ್ಧ ಸಂರಕ್ಷಣೆ ನೀಡುವುದಕ್ಕಾಗಿ ನಮಗೆ ಮಾಹಿತಿ ಒದಗಿಸುವ ಸುರಕ್ಷತಾ ಪಾಲುದಾರರು ಸೇರಿದಂತೆ, ವಿಶ್ವಾಸಾರ್ಹ ಪಾಲುದಾರರಿಂದ ನಾವು ನಿಮ್ಮ ಕುರಿತು ಮಾಹಿತಿ ಸಂಗ್ರಹಿಸಬಹುದು. ಜಾಹೀರಾತುದಾರರ ಪರವಾಗಿ ಜಾಹೀರಾತುಗಳು ಮತ್ತು ಸಂಶೋಧನಾ ಸೇವೆಗಳನ್ನು ಒದಗಿಸಲು, ಅವರಿಂದಲೂ ನಾವು ಮಾಹಿತಿಯನ್ನು ಸ್ವೀಕರಿಸುತ್ತೇವೆ.

ಮಾಹಿತಿಯನ್ನು ಸಂಗ್ರಹಿಸಲು ಮತ್ತು ಸಂಗ್ರಹಣೆ ಮಾಡಲು, ಕುಕೀಗಳು, ಪಿಕ್ಸೆಲ್ ಟ್ಯಾಗ್‌ಗಳು, ಹಾಗೂ ಬ್ರೌಸರ್ ವೆಬ್ ಸಂಗ್ರಹಣೆ ಅಥವಾ ಅಪ್ಲಿಕೇಶನ್ ಡೇಟಾ ಕ್ಯಾಶ್‌ಗಳಂತಹ ಸ್ಥಳೀಯ ಸಂಗ್ರಹಣೆ, ಡೇಟಾಬೇಸ್‌ಗಳು ಮತ್ತು ಸರ್ವರ್ ಲಾಗ್‌ಗಳಂತಹ ವಿವಿಧ ತಂತ್ರಜ್ಞಾನಗಳನ್ನು ನಾವು ಬಳಸುತ್ತೇವೆ.

---

GOOGLE ಯಾಕೆ ಡೇಟಾ ಸಂಗ್ರಹಿಸುತ್ತದೆ

# ಉತ್ತಮ ಸೇವೆಗಳನ್ನು ನಿರ್ಮಿಸುವುದಕ್ಕಾಗಿ ನಾವು ಡೇಟಾ ಬಳಸುತ್ತೇವೆ

ನಮ್ಮೆಲ್ಲಾ ಸೇವೆಗಳಿಂದ ನಾವು ಸಂಗ್ರಹಿಸುವ ಮಾಹಿತಿಯನ್ನು ಈ ಕೆಳಗಿನ ಉದ್ದೇಶಗಳಿಗಾಗಿ ನಾವು ಬಳಸುತ್ತೇವೆ:

## ನಮ್ಮ ಸೇವೆಗಳನ್ನು ಒದಗಿಸಲು

ನೀವು ಹುಡುಕುವ ಪದಗಳ ಕುರಿತು ಫಲಿತಾಂಶಗಳನ್ನು ನೀಡುವುದಕ್ಕಾಗಿ ಆ ಪದಗಳನ್ನು ಪ್ರಕ್ರಿಯೆಗೊಳಿಸುವುದು ಅಥವಾ ನಿಮ್ಮ ಸಂಪರ್ಕಗಳಿಂದ ಸ್ವೀಕೃತಿದಾರರನ್ನು ಸಲಹೆ ಮಾಡುವ ಮೂಲಕ, ವಿಷಯಗಳನ್ನು ಹಂಚಿಕೊಳ್ಳಲು ನಿಮಗೆ ನೆರವಾಗುವುದು ಸೇರಿದಂತೆ, ನಮ್ಮ ಸೇವೆಗಳನ್ನು ಒದಗಿಸುವುದಕ್ಕಾಗಿ ನಿಮ್ಮ ಮಾಹಿತಿಯನ್ನು ನಾವು ಬಳಸುತ್ತೇವೆ.

## ನಮ್ಮ ಸೇವೆಗಳನ್ನು ನಿರ್ವಹಿಸುವುದು ಮತ್ತು ಸುಧಾರಿಸುವುದು

ನಮ್ಮ ಸೇವೆಗಳು ಉದ್ದೇಶಿಸಿದಂತೆ ಕೆಲಸ ಮಾಡುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಕೂಡಾ ನಾವು ನಿಮ್ಮ ಮಾಹಿತಿಯನ್ನು ಬಳಸುತ್ತೇವೆ. ಉದಾಹರಣೆಗೆ, ಸ್ಥಗಿತಗೊಳ್ಳುವಿಕೆಯನ್ನು ಟ್ರ್ಯಾಕ್ ಮಾಡುವುದು ಅಥವಾ ನೀವು ನಮಗೆ ವರದಿ ಮಾಡುವ ಸಮಸ್ಯೆಗಳನ್ನು ನಿವಾರಿಸುವುದು. ಮತ್ತು ನಮ್ಮ ಸೇವೆಗಳನ್ನು ಸುಧಾರಿಸಲು ನಾವು ನಿಮ್ಮ ಮಾಹಿತಿಯನ್ನು ಬಳಸುತ್ತೇವೆ — ಉದಾಹರಣೆಗೆ, ಜನರು ಹೆಚ್ಚಾಗಿ ಯಾವ ಹುಡುಕಾಟ ಪದಗಳನ್ನು ತಪ್ಪಾಗಿ ಬರೆಯುತ್ತಾರೆ ಎಂಬುದನ್ನು ನಾವು ಅರ್ಥಮಾಡಿಕೊಂಡರೆ ನಮ್ಮೆಲ್ಲಾ ಸೇವೆಗಳಾದ್ಯಂತ ಕಾಗುಣಿತ ಪರೀಕ್ಷೆಯ ವೈಶಿಷ್ಟ್ಯವನ್ನು ಸುಧಾರಿಸಲು ಸಾಧ್ಯವಾಗುತ್ತದೆ.

## ಹೊಸ ಸೇವೆಗಳನ್ನು ಅಭಿವೃದ್ಧಿಪಡಿಸಲು

ಅಸ್ತಿತ್ವದಲ್ಲಿರುವ ಸೇವೆಗಳಲ್ಲಿ ನಾವು ಸಂಗ್ರಹಿಸಿದ ಮಾಹಿತಿಯನ್ನು, ಹೊಸ ಸೇವೆಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ನಾವು ಬಳಸುತ್ತೇವೆ. ಉದಾಹರಣೆಗೆ, Google ನ ಮೊದಲ ಫೋಟೋಗಳ ಅಪ್ಲಿಕೇಶನ್ ಆಗಿರುವ Picasa ದಲ್ಲಿ ಜನರು ತಮ್ಮ ಫೋಟೋಗಳನ್ನು ಹೇಗೆ ವ್ಯವಸ್ಥಿತಗೊಳಿಸುತ್ತಾರೆ ಎನ್ನುವುದನ್ನು ಅರ್ಥಮಾಡಿಕೊಂಡ ಕಾರಣ, Google Photos ಅಪ್ಲಿಕೇಶನ್ ಅನ್ನು ವಿನ್ಯಾಸಗೊಳಿಸಿ, ಪ್ರಾರಂಭಿಸಲು ನಮಗೆ ಸಾಧ್ಯವಾಯಿತು.

## ವಿಷಯ ಮತ್ತು ಜಾಹೀರಾತುಗಳೂ ಸೇರಿದಂತೆ, ವೈಯಕ್ತೀಕರಿಸಿದ ಸೇವೆಗಳನ್ನು ಒದಗಿಸುವುದು

ಶಿಫಾರಸುಗಳು, ವೈಯಕ್ತೀಕರಿಸಿದ ವಿಷಯ ಮತ್ತು ಕಸ್ಟಮೈಸ್ ಮಾಡಿದ ಹುಡುಕಾಟ ಫಲಿತಾಂಶಗಳನ್ನು ಒದಗಿಸುವುದು ಸೇರಿದಂತೆ ನಮ್ಮ ಸೇವೆಗಳನ್ನು ನಿಮಗಾಗಿ ಕಸ್ಟಮೈಸ್ ಮಾಡಲು, ನಾವು ಸಂಗ್ರಹಿಸುವ ಮಾಹಿತಿಯನ್ನು ಬಳಸುತ್ತೇವೆ. ಉದಾಹರಣೆಗೆ, ನೀವು Google ಉತ್ಪನ್ನಗಳನ್ನು ಹೇಗೆ ಬಳಸುತ್ತೀರಿ ಎಂಬುದನ್ನು ಹೊಂದಿಕೊಂಡು, ಸೆಕ್ಯುರಿಟಿ ಚೆಕ್-ಅಪ್ ನಿಮಗೆ ಸುರಕ್ಷತೆಯ ಕುರಿತಾಗಿ ಸಲಹೆಗಳನ್ನು ನೀಡುತ್ತದೆ. ಮತ್ತು ನಿಮಗೆ ಇಷ್ಟವಾಗಬಹುದಾದ ಹೊಸ ಅಪ್ಲಿಕೇಶನ್ಗಳ ಕುರಿತು ಸಲಹೆ ನೀಡಲು, ನೀವು ಈಗಾಗಲೇ ಇನ್ಸ್ಟಾಲ್ ಮಾಡಿರುವ ಅಪ್ಲಿಕೇಶನ್ಗಳು ಮತ್ತು ವೀಕ್ಷಿಸಿರುವ ವೀಡಿಯೊಗಳ ಕುರಿತಾದ ಮಾಹಿತಿಯನ್ನು Google Play ಬಳಸುತ್ತದೆ.

ನಿಮ್ಮ ಸೆಟ್ಟಿಂಗ್‌ಗಳನ್ನು ಆಧರಿಸಿ, ನಿಮ್ಮ ಆಸಕ್ತಿಗಳಿಗೆ ಅನುಗುಣವಾದ ವೈಯಕ್ತೀಕರಿಸಿದ ಜಾಹೀರಾತುಗಳನ್ನು ಕೂಡಾ ನಾವು ತೋರಿಸಬಹುದು. ಉದಾಹರಣೆಗೆ, ನೀವು “ಮೌಂಟೇನ್ ಬೈಕ್‌ಗಳು,” ಎಂದು ಹುಡುಕಿದರೆ, Google ಒದಗಿಸುವ ಜಾಹೀರಾತುಗಳನ್ನು ತೋರಿಸುವ ಸೈಟ್ ಅನ್ನು ನೀವು ಬ್ರೌಸ್ ಮಾಡುತ್ತಿರುವಾಗ, ಕ್ರೀಡಾ ಉಪಕರಣಗಳಿಗೆ ಸಂಬಂಧಿಸಿದ ಜಾಹೀರಾತನ್ನು ನೀವು ನೋಡಬಹುದು. ನಿಮಗೆ ಜಾಹೀರಾತುಗಳನ್ನು ತೋರಿಸಲು ನಾವು ಯಾವ ಮಾಹಿತಿಯನ್ನು ಬಳಸುತ್ತೇವೆ ಎಂಬುದನ್ನು, ನಿಮ್ಮ ಜಾಹೀರಾತು ಸೆಟ್ಟಿಂಗ್‌ಗಳಿಗೆ ಭೇಟಿ ನೀಡುವ ಮೂಲಕ ನೀವು ನಿಯಂತ್ರಿಸಬಹುದು.

- ಜನಾಂಗ, ಧರ್ಮ, ಲೈಂಗಿಕ ಅಭಿರುಚಿ ಅಥವಾ ಆರೋಗ್ಯದಂತಹ ಸಂವೇದನಶೀಲ ವರ್ಗಗಳನ್ನು ಆಧರಿಸಿ ವೈಯಕ್ತೀಕರಿಸಿದ ಜಾಹೀರಾತುಗಳನ್ನು ನಾವು ನಿಮಗೆ ತೋರಿಸುವುದಿಲ್ಲ.
- ನೀವು ವಿನಂತಿಸಿಕೊಳ್ಳದ ಹೊರತು, ನಿಮ್ಮ ಹೆಸರು ಅಥವಾ ಇಮೇಲ್‌ನಂತಹ, ನಿಮ್ಮನ್ನು ವೈಯಕ್ತಿಕವಾಗಿ ಗುರುತಿಸಬಹುದಾದ ಮಾಹಿತಿಯನ್ನು ನಾವು ಜಾಹೀರಾತುದಾರರೊಂದಿಗೆ ಹಂಚಿಕೊಳ್ಳುವುದಿಲ್ಲ. ಉದಾಹರಣೆಗೆ, ನೀವು ಸಮೀಪದ ಹೂವಿನಂಗಡಿಯ ಜಾಹೀರಾತನ್ನು ನೋಡಿ “ಕರೆ ಮಾಡಲು ಟ್ಯಾಪ್ ಮಾಡಿ” ಬಟನ್ ಅನ್ನು ಆಯ್ಕೆ ಮಾಡಿದರೆ, ನಿಮ್ಮ ಕರೆಗೆ ನಾವು ಸಂಪರ್ಕ ನೀಡುತ್ತೇವೆ ಮತ್ತು ಹೂವಿನಂಗಡಿಯೊಂದಿಗೆ ನಿಮ್ಮ ಫೋನ್ ಸಂಖ್ಯೆಯನ್ನು ನಾವು ಹಂಚಿಕೊಳ್ಳಬಹುದು.

---

ಜಾಹೀರಾತು ಸೆಟ್ಟಿಂಗ್‌ಗಳಿಗೆ ಹೋಗಿ

---

## ಕಾರ್ಯಕ್ಷಮತೆಯನ್ನು ಮಾಪನ ಮಾಡಿ

ನಮ್ಮ ಸೇವೆಗಳನ್ನು ಹೇಗೆ ಬಳಸಲಾಗುತ್ತದೆ ಎನ್ನುವುದನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ, ವಿಶ್ಲೇಷಣೆ ಮತ್ತು ಮಾಪನಕ್ಕಾಗಿ ನಾವು ಡೇಟಾವನ್ನು ಬಳಸುತ್ತೇವೆ. ಉದಾಹರಣೆಗೆ, ನಮ್ಮ ಸೈಟ್‌ಗಳಿಗೆ ನೀವು ನೀಡುವ ಭೇಟಿಗಳ ಡೇಟಾವನ್ನು ವಿಶ್ಲೇಷಿಸುತ್ತೇವೆ ಮತ್ತು ಉತ್ಪನ್ನದ ವಿನ್ಯಾಸವನ್ನು ಆಪ್ಟಿಮೈಸ್ ಮಾಡುವಂತಹ ಕಾರ್ಯಗಳಿಗಾಗಿ ಅದನ್ನು ಬಳಸುತ್ತೇವೆ. ತಮ್ಮ ಜಾಹೀರಾತು ಅಭಿಯಾನಗಳ ಕಾರ್ಯಕ್ಷಮತೆಯನ್ನು ಜಾಹೀರಾತುದಾರರು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳುವುದಕ್ಕಾಗಿ, ನೀವು ಸಂವಹಿಸುವ ಜಾಹೀರಾತುಗಳ ಕುರಿತಾದ ಡೇಟಾವನ್ನು ಸಹ ನಾವು ಬಳಸುತ್ತೇವೆ. ಇದಕ್ಕಾಗಿ ನಾವು Google Analytics ಸೇರಿದಂತೆ ವಿವಿಧ ಪರಿಕರಗಳನ್ನು ಬಳಸುತ್ತೇವೆ. Google Analytics ಅನ್ನು ಬಳಸುವ ಸೈಟ್‌ಗಳಿಗೆ ನೀವು ಭೇಟಿ ನೀಡಿದಾಗ, Google ಮತ್ತು Google Analytics ಗ್ರಾಹಕ, ಆ ಸೈಟ್‌ನಲ್ಲಿನ ನಿಮ್ಮ ಚಟುವಟಿಕೆ ಮತ್ತು ನಮ್ಮ ಜಾಹೀರಾತು ಸೇವೆಗಳನ್ನು ಬಳಸುವ ಇತರ ಸೈಟ್‌ಗಳಲ್ಲಿನ ನಿಮ್ಮ ಚಟುವಟಿಕೆಯ ಮಾಹಿತಿಯನ್ನು ಲಿಂಕ್ ಮಾಡಬಹುದು.

## ನಿಮ್ಮೊಂದಿಗೆ ಸಂವಹಿಸಲು

ನಿಮ್ಮ ಕುರಿತಾಗಿ ನಾವು ಸಂಗ್ರಹಿಸುವ ಇಮೇಲ್ ವಿಳಾಸದಂತಹ ಮಾಹಿತಿಯನ್ನು, ನಿಮ್ಮೊಂದಿಗೆ ನೇರವಾಗಿ ಸಂವಹಿಸಲು ನಾವು ಬಳಸುತ್ತೇವೆ. ಉದಾಹರಣೆಗೆ, ಅಸಹಜವಾದ ಸ್ಥಳದಿಂದ ನಿಮ್ಮ Google ಖಾತೆಗೆ ಸೈನ್ ಇನ್ ಮಾಡುವ ಪ್ರಯತ್ನದಂತಹ ಸಂಶಯಾಸ್ಪದ ಚಟುವಟಿಕೆಯನ್ನು ನಾವು ಪತ್ತೆಹಚ್ಚಿದರೆ ನಾವು ನಿಮಗೆ ಅಧಿಸೂಚನೆ ಕಳುಹಿಸಬಹುದು. ಅಥವಾ, ನಮ್ಮ ಸೇವೆಗಳಲ್ಲಿನ ಮುಂಬರುವ ಬದಲಾವಣೆಗಳು ಅಥವಾ ಸುಧಾರಣೆಗಳ ಕುರಿತು ನಾವು ನಿಮಗೆ ತಿಳಿಸಬಹುದು. ಮತ್ತು, ನೀವು Google ಅನ್ನು ಸಂಪರ್ಕಿಸಿದರೆ, ಆ ಕೋರಿಕೆಯ ದಾಖಲೆಯನ್ನು ನಾವು ಇರಿಸಿಕೊಳ್ಳುತ್ತೇವೆ ಮತ್ತು ನೀವು ಎದುರಿಸುತ್ತಿರಬಹುದಾದ ಯಾವುದೇ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಅದನ್ನು ಬಳಸುತ್ತೇವೆ.

## Google, ನಮ್ಮ ಬಳಕೆದಾರರು ಮತ್ತು ಸಾರ್ವಜನಿಕರನ್ನು ಸಂರಕ್ಷಿಸಲು

ನಮ್ಮ ಸೇವೆಗಳ ಸುರಕ್ಷತೆ ಮತ್ತು ವಿಶ್ವಾಸಾರ್ಹತೆಯನ್ನು ಸುಧಾರಿಸುವಲ್ಲಿ ಸಹಾಯ ಮಾಡುವುದಕ್ಕಾಗಿ, ನಾವು ಮಾಹಿತಿಯನ್ನು ಬಳಸುತ್ತೇವೆ. ವಂಚನೆ, ದುರ್ಬಳಕೆ, ಸುರಕ್ಷತಾ ಅಪಾಯಗಳು ಮತ್ತು Google, ನಮ್ಮ ಬಳಕೆದಾರರು ಅಥವಾ ಸಾರ್ವಜನಿಕರಿಗೆ ಹಾನಿಮಾಡಬಹುದಾದಂತಹ ತಾಂತ್ರಿಕ ಸಮಸ್ಯೆಗಳನ್ನು ಪತ್ತೆಹಚ್ಚುವುದು, ತಡೆಗಟ್ಟುವುದು ಮತ್ತು ಅದಕ್ಕೆ ಪ್ರತಿಕ್ರಿಯಿಸುವುದನ್ನು ಇದು ಒಳಗೊಂಡಿದೆ.

---

ಈ ಉದ್ದೇಶಗಳಿಗಾಗಿ ನಿಮ್ಮ ಮಾಹಿತಿಯನ್ನು ಪ್ರಕ್ರಿಯೆಗೊಳಿಸಲು ನಾವು ಬೇರೆ ಬೇರೆ ತಂತ್ರಜ್ಞಾನಗಳನ್ನು ಬಳಸುತ್ತೇವೆ. ನಿಮಗಾಗಿ ಕಸ್ಟಮೈಸ್ ಮಾಡಿದ ಹುಡುಕಾಟ ಫಲಿತಾಂಶಗಳು, ವೈಯಕ್ತೀಕರಿಸಿದ ಜಾಹೀರಾತುಗಳು ಅಥವಾ ನಮ್ಮ ಸೇವೆಗಳನ್ನು ನೀವು ಹೇಗೆ ಬಳಸುತ್ತೀರಿ ಎಂಬುದಕ್ಕೆ ತಕ್ಕಂತೆ ಹೊಂದಿಸಿದ ಇತರ ಸೇವೆಗಳನ್ನು ಒದಗಿಸುವುದಕ್ಕಾಗಿ ನಿಮ್ಮ ವಿಷಯವನ್ನು ವಿಶ್ಲೇಷಿಸುವ ಸ್ವಯಂಚಾಲಿತ ಸಿಸ್ಟಮ್ಗಳನ್ನು ನಾವು ಬಳಸುತ್ತೇವೆ. ಸ್ಪ್ಯಾಮ್, ಮಾಲ್ವೇರ್ ಮತ್ತು ಕಾನೂನುಬಾಹಿರ ವಿಷಯದಂತಹ ದುರ್ಬಳಕೆಯನ್ನು ಪತ್ತೆಹಚ್ಚಲು ನಮಗೆ ಸಹಾಯ ಮಾಡುವುದಕ್ಕಾಗಿ ನಿಮ್ಮ ಕಂಟೆಂಟ್ ಅನ್ನು ನಾವು ವಿಶ್ಲೇಷಿಸುತ್ತೇವೆ. ಡೇಟಾದಲ್ಲಿನ ವಿನ್ಯಾಸಗಳನ್ನು ಗುರುತಿಸಲು, ನಾವು ಅಲ್ಗಾರಿದಂಗಳನ್ನು ಸಹ ಬಳಸುತ್ತೇವೆ. ಉದಾಹರಣೆಗೆ, ನೀವು ಅನುವಾದಿಸಲು ಹೇಳುವ ಪದಗುಚ್ಛಗಳಲ್ಲಿನ ಸಾಮಾನ್ಯ ಭಾಷಾ ವಿನ್ಯಾಸಗಳನ್ನು ಪತ್ತೆಹಚ್ಚುವ ಮೂಲಕ ಬೇರೆ ಬೇರೆ ಭಾಷೆಗಳನ್ನು ಮಾತನಾಡುವ ಜನರು ಸಂವಹಿಸಲು Google Translate ಸಹಾಯ ಮಾಡುತ್ತದೆ.

ಈ ಮೇಲೆ ಹೇಳಿದ ಉದ್ದೇಶಗಳಿಗಾಗಿ, ನಮ್ಮ ಸೇವೆಗಳು ಮತ್ತು ನಿಮ್ಮ ಸಾಧನಗಳಾದ್ಯಂತ ನಾವು ಸಂಗ್ರಹಿಸುವ ಮಾಹಿತಿಯನ್ನು ಸಂಯೋಜಿಸಬಹುದು. ಉದಾಹರಣೆಗೆ, ನೀವು YouTube ನಲ್ಲಿ ಗಿಟಾರ್ ನುಡಿಸುವವರ ವೀಡಿಯೊಗಳನ್ನು ವೀಕ್ಷಿಸಿದರೆ, ನಮ್ಮ

ಜಾಹೀರಾತು ಉತ್ಪನ್ನಗಳನ್ನು ಬಳಸುವ ಸೈಟ್‌ನಲ್ಲಿ ನೀವು ಗಿಟಾರ್ ಕಲಿಕೆಯ ಜಾಹೀರಾತನ್ನು ನೋಡಬಹುದು. ನಿಮ್ಮ ಖಾತೆಯ ಸೆಟ್ಟಿಂಗ್‌ಗಳನ್ನು ಆಧರಿಸಿ, ಇತರ ಸೈಟ್‌ಗಳು ಮತ್ತು ಅಪ್ಲಿಕೇಶನ್‌ಗಳಲ್ಲಿನ ನಿಮ್ಮ ಚಟುವಟಿಕೆಯನ್ನು ನಿಮ್ಮ ವೈಯಕ್ತಿಕ ಮಾಹಿತಿಯೊಂದಿಗೆ ಸಂಯೋಜಿಸಬಹುದು ಮತ್ತು Google ನ ಸೇವೆಗಳು ಮತ್ತು Google ಒದಗಿಸುವ ಜಾಹೀರಾತುಗಳನ್ನು ಸುಧಾರಿಸಲು ಅದನ್ನು ಬಳಸಬಹುದು.

ಇತರ ಬಳಕೆದಾರರು ನಿಮ್ಮ ಇಮೇಲ್ ವಿಳಾಸ ಅಥವಾ ನಿಮ್ಮನ್ನು ಗುರುತಿಸುವ ಇತರ ಮಾಹಿತಿಯನ್ನು ಈಗಾಗಲೇ ಹೊಂದಿದ್ದರೆ, ನಿಮ್ಮ ಹೆಸರು ಮತ್ತು ಫೋಟೋದಂತಹ ಸಾರ್ವಜನಿಕವಾಗಿ ಗೋಚರಿಸುವ Google ಖಾತೆ ಮಾಹಿತಿಯನ್ನು ನಾವು ಅವರಿಗೆ ತೋರಿಸಬಹುದು. ಉದಾಹರಣೆಗೆ, ನೀವು ಕಳುಹಿಸುವ ಇಮೇಲ್‌ಗಳನ್ನು ಗುರುತಿಸಲು ಇದು ಜನರಿಗೆ ಸಹಾಯ ಮಾಡುತ್ತದೆ.

ಈ ಗೌಪ್ಯತೆ ನೀತಿಯಲ್ಲಿ ಹೇಳಿರದ ಉದ್ದೇಶಕ್ಕಾಗಿ ನಿಮ್ಮ ಮಾಹಿತಿಯನ್ನು ಬಳಸುವ ಮೊದಲು, ನಾವು ನಿಮ್ಮ ಸಮ್ಮತಿಯನ್ನು ಕೋರುತ್ತೇವೆ.

---

ನಿಮ್ಮ ಗೌಪ್ಯತೆ ನಿಯಂತ್ರಣಗಳು

# ನಾವು ಸಂಗ್ರಹಿಸುವ ಮಾಹಿತಿ ಮತ್ತು ಅದನ್ನು ಹೇಗೆ ಬಳಸಲಾಗುತ್ತದೆ ಎಂಬುದರ ಕುರಿತು ನಿಮಗೆ ಆಯ್ಕೆಗಳಿವೆ

ನಮ್ಮ ಸೇವೆಗಳಾದ್ಯಂತ ನಿಮ್ಮ ಗೌಪ್ಯತೆಯನ್ನು ನಿರ್ವಹಿಸುವುದಕ್ಕಾಗಿ ಇರುವ ಪ್ರಮುಖ ನಿಯಂತ್ರಣಗಳನ್ನು ಈ ವಿಭಾಗವು ವಿವರಿಸುತ್ತದೆ. ನೀವು ಗೌಪ್ಯತೆ ಚೆಕ್-ಅಪ್‌ಗೆ ಕೂಡಾ ಭೇಟಿ ನೀಡಬಹುದು. ಪ್ರಮುಖ ಗೌಪ್ಯತೆ ಸೆಟ್ಟಿಂಗ್‌ಗಳನ್ನು ಪರಿಶೀಲಿಸಿ, ಹೊಂದಿಸಲು ಇದು ಅವಕಾಶ ನೀಡುತ್ತದೆ. ಈ ಪರಿಕರಗಳಲ್ಲದೆ, ನಮ್ಮ ಉತ್ಪನ್ನಗಳಲ್ಲಿಯೂ ಸಹ ನಾವು ನಿರ್ದಿಷ್ಟ ಗೌಪ್ಯತೆ ಸೆಟ್ಟಿಂಗ್‌ಗಳನ್ನು ಒದಗಿಸುತ್ತೇವೆ. ಇದರ ಕುರಿತು ಹೆಚ್ಚಿನ ಮಾಹಿತಿಯನ್ನು ಉತ್ಪನ್ನ ಗೌಪ್ಯತೆ ಮಾರ್ಗಸೂಚಿಯಲ್ಲಿ ಪಡೆದುಕೊಳ್ಳಬಹುದು.

---

ಗೌಪ್ಯತೆ ಪರಿಶೀಲನೆಗೆ ಹೋಗಿ

---

# ನಿಮ್ಮ ಮಾಹಿತಿಯನ್ನು ನಿರ್ವಹಿಸುವುದು, ಪರಿಶೀಲಿಸುವುದು ಮತ್ತು ಅಪ್‌ಡೇಟ್ ಮಾಡುವುದು

ನೀವು ಸೈನ್ ಇನ್ ಅಗಿರುವಾಗ, ನೀವು ಬಳಸುವ ಸೇವೆಗಳಿಗೆ ಭೇಟಿ ನೀಡುವ ಮೂಲಕ ನೀವು ಮಾಹಿತಿಯನ್ನು ಪರಿಶೀಲಿಸಬಹುದು ಮತ್ತು ಅಪ್‌ಡೇಟ್ ಮಾಡಬಹುದು. ಉದಾಹರಣೆಗೆ, ನೀವು Google ನಲ್ಲಿ ಉಳಿಸಿರುವ ನಿರ್ದಿಷ್ಟ ವಿಧಗಳ ವಿಷಯವನ್ನು ನಿರ್ವಹಿಸಲು, ಫೋಟೋಗಳು ಮತ್ತು ಡ್ರೈವ್, ಎರಡನ್ನೂ ವಿನ್ಯಾಸಗೊಳಿಸಲಾಗಿದೆ.

ನಿಮ್ಮ Google ಖಾತೆಯಲ್ಲಿ ಉಳಿಸಿರುವ ಮಾಹಿತಿಯನ್ನು ಪರಿಶೀಲಿಸಲು ಮತ್ತು ನಿಯಂತ್ರಿಸಲು ಕೂಡಾ ನಾವು ಒಂದು ಸ್ಥಳವನ್ನು ನಿರ್ಮಿಸಿದ್ದೇವೆ. ನಿಮ್ಮ Google ಖಾತೆಯಲ್ಲಿ ಇವು ಸೇರಿವೆ:

# ಗೌಪ್ಯತೆ ನಿಯಂತ್ರಣಗಳು

### ಚಟುವಟಿಕೆ ನಿಯಂತ್ರಣಗಳು

ನಿಮ್ಮ ಖಾತೆಯಲ್ಲಿ ಯಾವ ವಿಧಗಳ ಚಟುವಟಿಕೆಯನ್ನು ಉಳಿಸಬೇಕೆಂದು ನಿರ್ಧರಿಸಿ. ಉದಾಹರಣೆಗೆ, ನಿಮ್ಮ ದಿನನಿತ್ಯದ ಪ್ರಯಾಣಕ್ಕಾಗಿ ಟ್ರಾಫಿಕ್ ಮುನ್ನೋಟಗಳು ಬೇಕಿದ್ದರೆ ನೀವು ಸ್ಥಳ ಇತಿಹಾಸವನ್ನು ಆನ್ ಮಾಡಬಹುದು ಅಥವಾ ಉತ್ತಮ ವೀಡಿಯೊ ಸಲಹೆಗಳನ್ನು ಪಡೆಯಲು ಬಯಸುವಿರಾದರೆ ನಿಮ್ಮ YouTube ವೀಕ್ಷಣಾ ಇತಿಹಾಸವನ್ನು ಉಳಿಸಬಹುದು.

ಚಟುವಟಿಕೆ ನಿಯಂತ್ರಣಗಳಿಗೆ ಹೋಗಿ

---

### ಜಾಹೀರಾತು ಸೆಟ್ಟಿಂಗ್‌ಗಳು

Google ನಲ್ಲಿ ಮತ್ತು Google ಜೊತೆ ಪಾಲುದಾರಿಕೆ ಹೊಂದಿರುವ ಸೈಟ್‌ಗಳು ಮತ್ತು ಅಪ್ಲಿಕೇಶನ್‌ಗಳಲ್ಲಿ ನಿಮಗೆ ತೋರಿಸುವ ಜಾಹೀರಾತುಗಳ ಕುರಿತು ನಿಮ್ಮ ಆದ್ಯತೆಗಳನ್ನು ನಿರ್ವಹಿಸಿ. ನಿಮ್ಮ ಆಸಕ್ತಿಗಳನ್ನು ಮಾರ್ಪಡಿಸಿ, ಜಾಹೀರಾತುಗಳನ್ನು ನಿಮಗೆ ಇನ್ನಷ್ಟು ಸೂಕ್ತಗೊಳಿಸಲು ನಿಮ್ಮ ವೈಯಕ್ತಿಕ ಮಾಹಿತಿಯನ್ನು ಬಳಸಬೇಕೇ ಎಂಬುದನ್ನು ಆಯ್ಕೆ ಮಾಡಿ ಮತ್ತು ನಿರ್ದಿಷ್ಟ ಜಾಹೀರಾತು ಸೇವೆಗಳನ್ನು ಆನ್ ಅಥವಾ ಆಫ್ ಮಾಡಿ.

ಜಾಹೀರಾತು ಸೆಟ್ಟಿಂಗ್‌ಗಳಿಗೆ ಹೋಗಿ

---

### ನಿಮ್ಮ ಕುರಿತು

Google ಸೇವೆಗಳಾದ್ಯಂತ ನಿಮ್ಮ ಕುರಿತು ಇತರರು ಏನೇನು ನೋಡುತ್ತಾರೆ ಎಂಬುದನ್ನು ನಿಯಂತ್ರಿಸಿ.

ನಿಮ್ಮ ಕುರಿತು ಎಂಬಲ್ಲಿಗೆ ಹೋಗಿ

---

### ಹಂಚಿಕೊಂಡಿರುವ ಅನುಮೋದನೆಗಳು

ಅಭಿಪ್ರಾಯಗಳು ಮತ್ತು ಶಿಫಾರಸುಗಳಂತಹ ನಿಮ್ಮ ಚಟುವಟಿಕೆಯ ಪಕ್ಕದಲ್ಲಿ ನಿಮ್ಮ ಹೆಸರು ಮತ್ತು ಫೋಟೋ ಕಾಣಿಸಿಕೊಳ್ಳಬೇಕೇ ಎನ್ನುವುದನ್ನು ಆಯ್ಕೆ ಮಾಡಿ.

ಹಂಚಿಕೊಂಡಿರುವ ಅನುಮೋದನೆಗಳಿಗೆ ಹೋಗಿ

---

### ನೀವು ಹಂಚಿಕೊಳ್ಳುವ ಮಾಹಿತಿ

ನೀವು G Suite ಬಳಕೆದಾರರಾಗಿದ್ದರೆ, Google+ ನಲ್ಲಿರುವ ನಿಮ್ಮ ಖಾತೆಯನ್ನು ಬಳಸಿಕೊಂಡು ನೀವು ಯಾರ ಜೊತೆಗೆ ಮಾಹಿತಿಯನ್ನು ಹಂಚಿಕೊಳ್ಳುತ್ತೀರಿ ಎಂಬುದನ್ನು ನಿಯಂತ್ರಿಸಿ.

ನೀವು ಹಂಚಿಕೊಳ್ಳುವ ಮಾಹಿತಿಗೆ ಹೋಗಿ

---

## ನಿಮ್ಮ ಮಾಹಿತಿಯನ್ನು ಪರಿಶೀಲಿಸಲು ಮತ್ತು ಅಪ್‌ಡೇಟ್ ಮಾಡಲು ಮಾರ್ಗಗಳು

### ನನ್ನ ಚಟುವಟಿಕೆ

ನೀವು ನಡೆಸುವ ಹುಡುಕಾಟಗಳು ಅಥವಾ Google Play ಗೆ ನಿಮ್ಮ ಭೇಟಿಗಳಂತಹ Google ಸೇವೆಗಳನ್ನು ನೀವು ಬಳಸುವಾಗ ಉತ್ಪತ್ತಿಯಾಗುವ ಡೇಟಾವನ್ನು ಪರಿಶೀಲಿಸಲು ಮತ್ತು ನಿಯಂತ್ರಿಸಲು, ನನ್ನ ಚಟುವಟಿಕೆ ನಿಮಗೆ ಅವಕಾಶ ನೀಡುತ್ತದೆ. ನೀವು ದಿನಾಂಕ ಮತ್ತು ವಿಷಯದ ಪ್ರಕಾರ ಬ್ರೌಸ್ ಮಾಡಬಹುದು ಮತ್ತು ನಿಮ್ಮ ಚಟುವಟಿಕೆಯನ್ನು ಆಂಶಿಕವಾಗಿ ಅಥವಾ ಸಂಪೂರ್ಣವಾಗಿ ಅಳಿಸಬಹುದು.

ನನ್ನ ಚಟುವಟಿಕೆಗೆ ಹೋಗಿ

---

### Google ಡ್ಯಾಶ್‌ಬೋರ್ಡ್

ನಿರ್ದಿಷ್ಟ ಉತ್ಪನ್ನಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನಿರ್ವಹಿಸಲು Google ಡ್ಯಾಶ್‌ಬೋರ್ಡ್ ಅವಕಾಶ ನೀಡುತ್ತದೆ.

ಡ್ಯಾಶ್‌ಬೋರ್ಡ್‌ಗೆ ಹೋಗಿ

---

### ನಿಮ್ಮ ವೈಯಕ್ತಿಕ ಮಾಹಿತಿ

ನಿಮ್ಮ ಹೆಸರು, ಇಮೇಲ್ ವಿಳಾಸ ಮತ್ತು ಫೋನ್ ಸಂಖ್ಯೆಯಂತಹ ಸಂಪರ್ಕ ಮಾಹಿತಿಯನ್ನು ನಿರ್ವಹಿಸಿ.

ವೈಯಕ್ತಿಕ ಮಾಹಿತಿಗೆ ಹೋಗಿ

---

ನೀವು ಸೈನ್ ಔಟ್ ಆಗಿರುವಾಗ, ಇವುಗಳನ್ನು ಒಳಗೊಂಡಂತೆ, ನಿಮ್ಮ ಬ್ರೌಸರ್ ಅಥವಾ ಸಾಧನಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀವು ನಿರ್ವಹಿಸಬಹುದು:

- ಸೈನ್-ಔಟ್ ಮಾಡಿರುವ ಹುಡುಕಾಟದ ವೈಯಕ್ತೀಕರಣ ನಿಮಗೆ ಹೆಚ್ಚು ಸೂಕ್ತವಾದ ಫಲಿತಾಂಶಗಳು ಮತ್ತು ಶಿಫಾರಸುಗಳನ್ನು ಒದಗಿಸಲು ನಿಮ್ಮ ಹುಡುಕಾಟದ ಚಟುವಟಿಕೆಯನ್ನು ಬಳಸಬೇಕೇ ಎಂಬುದನ್ನು ಆಯ್ಕೆ ಮಾಡಿ.
- YouTube ಸೆಟ್ಟಿಂಗ್‌ಗಳು: ನಿಮ್ಮ YouTube ಹುಡುಕಾಟ ಇತಿಹಾಸ ಮತ್ತು ನಿಮ್ಮ YouTube ವೀಕ್ಷಣಾ ಇತಿಹಾಸವನ್ನು ಸ್ಥಗಿತಗೊಳಿಸಿ ಮತ್ತು ಅಳಿಸಿ.
- ಜಾಹೀರಾತು ಸೆಟ್ಟಿಂಗ್‌ಗಳು: Google ನಲ್ಲಿ ಮತ್ತು ಜಾಹೀರಾತುಗಳನ್ನು ತೋರಿಸುವುದಕ್ಕಾಗಿ Google ಜೊತೆ ಪಾಲುದಾರಿಕೆ ಹೊಂದಿರುವ ಸೈಟ್‌ಗಳು ಮತ್ತು ಅಪ್ಲಿಕೇಶನ್‌ಗಳಲ್ಲಿ ನಿಮಗೆ ತೋರಿಸುವ ಜಾಹೀರಾತುಗಳಿಗೆ ಸಂಬಂಧಿಸಿದಂತೆ ನಿಮ್ಮ ಆದ್ಯತೆಗಳನ್ನು ನಿರ್ವಹಿಸಿ.

# ನಿಮ್ಮ ಮಾಹಿತಿಯನ್ನು ರಫ್ತು ಮಾಡುವುದು, ತೆಗೆದುಹಾಕುವುದು ಮತ್ತು ಅಳಿಸುವುದು

ಬ್ಯಾಕಪ್ ಮಾಡಬೇಕಿದ್ದರೆ ಅಥವಾ Google ಗೆ ಹೊರತಾದ ಸೇವೆಯಲ್ಲಿ ಅದನ್ನು ಬಳಸಬೇಕಿದ್ದರೆ, ನಿಮ್ಮ Google ಖಾತೆಯಲ್ಲಿನ ವಿಷಯದ ನಕಲನ್ನು ರಫ್ತು ಮಾಡಬಹುದು.

---

ನಿಮ್ಮ ಡೇಟಾವನ್ನು ರಫ್ತು ಮಾಡಿ

---

ಅನ್ವಯಿಸುವ ಕಾನೂನನ್ನು ಆಧರಿಸಿ, ನಿರ್ದಿಷ್ಟ Google ಸೇವೆಗಳಿಂದ ವಿಷಯವನ್ನು ತೆಗೆದುಹಾಕಲು ನೀವು ವಿನಂತಿಸಬಹುದು.

ನಿಮ್ಮ ಮಾಹಿತಿಯನ್ನು ಅಳಿಸಲು, ನೀವು ಹೀಗೆ ಮಾಡಬಹುದು:

- ನಿರ್ದಿಷ್ಟ Google ಸೇವೆಗಳಿಂದ ನಿಮ್ಮ ವಿಷಯವನ್ನು ಅಳಿಸುವುದು
- ನನ್ನ ಚಟುವಟಿಕೆ ಬಳಸಿ, ನಿಮ್ಮ ಖಾತೆಯಲ್ಲಿ ನಿರ್ದಿಷ್ಟ ಐಟಂಗಳನ್ನು ಹುಡುಕುವುದು ಮತ್ತು ಅಳಿಸುವುದು
- ನಿರ್ದಿಷ್ಟ Google ಉತ್ಪನ್ನಗಳನ್ನು ಅಳಿಸುವುದು, ಜೊತೆಗೆ ಆ ಉತ್ಪನ್ನದೊಂದಿಗೆ ಸಂಯೋಜಿಸಿರುವ ನಿಮ್ಮ ಮಾಹಿತಿಯನ್ನು ಅಳಿಸುವುದು
- ನಿಮ್ಮ ಸಂಪೂರ್ಣ Google ಖಾತೆಯನ್ನು ಅಳಿಸುವುದು

---

ನಿಮ್ಮ ಮಾಹಿತಿಯನ್ನು ಅಳಿಸುವುದು

---

ಮತ್ತು ಅಂತಿಮವಾಗಿ, ನಿಮ್ಮ ಖಾತೆಯನ್ನು ಬಳಸಲು ಅನಿರೀಕ್ಷಿತವಾಗಿ ಸಾಧ್ಯವಾಗದ ಸಂದರ್ಭದಲ್ಲಿ ನಿಮ್ಮ Google ಖಾತೆಯ ಕೆಲವು ಭಾಗಗಳಿಗೆ ಬೇರೆ ಯಾರಿಗಾದರೂ ಪ್ರವೇಶ ಒದಗಿಸಲು ನಿಷ್ಕ್ರಿಯ ಖಾತೆ ನಿರ್ವಾಹಕ ಅವಕಾಶ ನೀಡುತ್ತದೆ.

---

ನೀವು Google ಖಾತೆಗೆ ಸೈನ್ ಇನ್ ಮಾಡಿದರೂ ಅಥವಾ ಮಾಡದಿದ್ದರೂ, Google ಸಂಗ್ರಹಿಸುವ ಮಾಹಿತಿಯನ್ನು ನಿಯಂತ್ರಿಸಲು, ಈ ಕೆಳಗಿನವುಗಳೂ ಸೇರಿದಂತೆ ಇತರ ಮಾರ್ಗಗಳಿವೆ:

- ಬ್ರೌಸರ್ ಸೆಟ್ಟಿಂಗ್‌ಗಳು: ಉದಾಹರಣೆಗೆ, Google ನಿಮ್ಮ ಬ್ರೌಸರ್‌ನಲ್ಲಿ ಕುಕೀಯನ್ನು ಹೊಂದಿಸಿದಾಗ ಸೂಚನೆ ನೀಡುವಂತೆ ನಿಮ್ಮ ಬ್ರೌಸರ್ ಅನ್ನು ನೀವು ಕಾನ್ಫಿಗರ್ ಮಾಡಬಹುದು. ನಿರ್ದಿಷ್ಟ ಡೊಮೇನ್‌ನಿಂದ ಅಥವಾ ಎಲ್ಲಾ ಡೊಮೇನ್‌ಗಳಿಂದ ಎಲ್ಲಾ ಕುಕೀಗಳನ್ನು ನಿರ್ಬಂಧಿಸಲು ಕೂಡಾ ನಿಮ್ಮ ಬ್ರೌಸರ್ ಅನ್ನು ನೀವು ಕಾನ್ಫಿಗರ್ ಮಾಡಬಹುದು. ಆದರೆ, ನಮ್ಮ ಸೇವೆಗಳು ನಿಮ್ಮ

ಭಾಷಾ ಆದ್ಯತೆಗಳನ್ನು ನೆನಪಿಡುವಂತಹ ಕೆಲಸಗಳನ್ನು ಮಾಡುವುದಕ್ಕಾಗಿ ಕುಕೀಗಳು ಸರಿಯಾಗಿ ಕಾರ್ಯಾಚರಿಸುವುದನ್ನು ಅವಲಂಬಿಸುತ್ತವೆ ಎನ್ನುವುದನ್ನು ನೆನಪಿಡಿ.

- ಸಾಧನ-ಮಟ್ಟದ ಸೆಟ್ಟಿಂಗ್‌ಗಳು: ನಾವು ಯಾವ ರೀತಿಯ ಮಾಹಿತಿಯನ್ನು ಸಂಗ್ರಹಿಸುತ್ತೇವೆ ಎಂಬುದನ್ನು ನಿರ್ಧರಿಸುವ ನಿಯಂತ್ರಣಗಳನ್ನು ನಿಮ್ಮ ಸಾಧನವು ಹೊಂದಿರಬಹುದು. ಉದಾಹರಣೆಗೆ, ನಿಮ್ಮ Android ಸಾಧನದಲ್ಲಿ ನೀವು ಸ್ಥಳ ಸೆಟ್ಟಿಂಗ್‌ಗಳನ್ನು ಮಾರ್ಪಡಿಸಬಹುದು.

---

ನಿಮ್ಮ ಮಾಹಿತಿಯನ್ನು ಹಂಚಿಕೊಳ್ಳುವುದು

## ನಿಮ್ಮ ಮಾಹಿತಿಯನ್ನು ನೀವು ಹಂಚಿಕೊಳ್ಳುವಾಗ

ಮಾಹಿತಿಯನ್ನು ಇತರ ಜನರೊಂದಿಗೆ ಹಂಚಿಕೊಳ್ಳಲು, ನಮ್ಮ ಹಲವಾರು ಸೇವೆಗಳು ನಿಮಗೆ ಅವಕಾಶ ನೀಡುತ್ತವೆ ಮತ್ತು ನೀವು ಹೇಗೆ ಹಂಚಿಕೊಳ್ಳುತ್ತೀರಿ ಎಂಬುದರ ಮೇಲೆ ನೀವು ನಿಯಂತ್ರಣವನ್ನು ಹೊಂದಿರುತ್ತೀರಿ. ಉದಾಹರಣೆಗೆ, ನೀವು YouTube ನಲ್ಲಿ ಸಾರ್ವಜನಿಕವಾಗಿ ವೀಡಿಯೊಗಳನ್ನು ಹಂಚಿಕೊಳ್ಳಬಹುದು ಅಥವಾ ನಿಮ್ಮ ವೀಡಿಯೊಗಳನ್ನು ಖಾಸಗಿಯಾಗಿ ಇರಿಸಿಕೊಳ್ಳಲು ಬಯಸಬಹುದು. ನೆನಪಿಡಿ, ನೀವು ಮಾಹಿತಿಯನ್ನು ಸಾರ್ವಜನಿಕವಾಗಿ ಹಂಚಿಕೊಂಡಾಗ, Google ಹುಡುಕಾಟದಂತಹ ಸರ್ಚ್ ಎಂಜಿನ್‌ಗಳ ಮೂಲಕ ನಿಮ್ಮ ವಿಷಯಕ್ಕೆ ಪ್ರವೇಶ ಪಡೆಯಲು ಸಾಧ್ಯವಾಗುತ್ತದೆ.

ನೀವು ಕೆಲವು Google ಸೇವೆಗಳಿಗೆ ಸೈನ್ ಇನ್ ಮಾಡಿದಾಗ ಮತ್ತು ಅವುಗಳೊಂದಿಗೆ ಸಂವಹನವನ್ನು ನಡೆಸಿದಾಗ, ಉದಾಹರಣೆಗೆ, YouTube ವೀಡಿಯೊ ಕುರಿತು ಕಾಮೆಂಟ್‌ಗಳನ್ನು ಮಾಡಿದಾಗ ಅಥವಾ Play ಸ್ಟೋರ್‌ನಲ್ಲಿನ ಆ್ಯಪ್ ಒಂದರ ಕುರಿತು ವಿಮರ್ಶಿಸಿದಾಗ, ನಿಮ್ಮ ಚಟುವಟಿಕೆಯ ಪಕ್ಕದಲ್ಲಿ ನಿಮ್ಮ ಹೆಸರು ಮತ್ತು ಫೋಟೋ ಕಾಣಿಸಿಕೊಳ್ಳುತ್ತವೆ. ನಾವು ಈ ಮಾಹಿತಿಯನ್ನು ನಿಮ್ಮ ಸ್ನೇಹಿತರ ಶಿಫಾರಸ್ಸುಗಳ ಸೆಟ್ಟಿಂಗ್ ಆಧಾರದ ಮೇಲೆ ಜಾಹೀರಾತುಗಳಲ್ಲಿಯೂ ಸಹ ಪ್ರದರ್ಶಿಸಬಹುದು.

## Google ನಿಮ್ಮ ಮಾಹಿತಿಯನ್ನು ಹಂಚಿಕೊಳ್ಳುವಾಗ

ಈ ಕೆಳಗಿನ ಸಂದರ್ಭಗಳನ್ನು ಹೊರತುಪಡಿಸಿ, ನಿಮ್ಮ ವೈಯಕ್ತಿಕ ಮಾಹಿತಿಯನ್ನು Google ಗೆ ಹೊರತಾದ ಕಂಪೆನಿಗಳು, ಸಂಸ್ಥೆಗಳು ಅಥವಾ ವ್ಯಕ್ತಿಗಳೊಂದಿಗೆ ನಾವು ಹಂಚಿಕೊಳ್ಳುವುದಿಲ್ಲ:

### ನಿಮ್ಮ ಸಮ್ಮತಿಯೊಂದಿಗೆ

ನೀವು ಸಮ್ಮತಿಸಿದರೆ, ನಾವು ವೈಯಕ್ತಿಕ ಮಾಹಿತಿಯನ್ನು Google ನ ಹೊರಗೆ ಹಂಚಿಕೊಳ್ಳುತ್ತೇವೆ. ಉದಾಹರಣೆಗೆ, ನೀವು ಬುಕಿಂಗ್ ಸೇವೆಯ ಮೂಲಕ ಕಾಯ್ದಿರಿಸುವಿಕೆಗೆ Google Home ಬಳಸಿದರೆ, ನಿಮ್ಮ ಹೆಸರು ಅಥವಾ ಫೋನ್ ಸಂಖ್ಯೆಯನ್ನು ರೆಸ್ಟೋರೆಂಟ್ ಜೊತೆಗೆ ಹಂಚಿಕೊಳ್ಳುವುದಕ್ಕೂ ಮೊದಲು ನಾವು ನಿಮ್ಮ ಅನುಮತಿಯನ್ನು ಪಡೆದುಕೊಳ್ಳುತ್ತೇವೆ. ಯಾವುದೇ ಸೂಕ್ಷ್ಮ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳಲು, ನಿಮ್ಮಿಂದ ಸ್ಪಷ್ಟ ಸಮ್ಮತಿಯನ್ನು ಕೇಳು ತ್ತೇವೆ.

### ಡೊಮೇನ್ ನಿರ್ವಾಹಕರೊಂದಿಗೆ

ನೀವು ವಿದ್ಯಾರ್ಥಿಯಾಗಿದ್ದರೆ ಅಥವಾ Google ಸೇವೆಗಳನ್ನು ಬಳಸುವ ಸಂಸ್ಥೆಗಾಗಿ (G Suite ನಂತೆ) ಕೆಲಸ ಮಾಡುತ್ತಿದ್ದರೆ, ನಿಮ್ಮ ಡೊಮೇನ್ ನಿರ್ವಾಹಕರು ಮತ್ತು ನಿಮ್ಮ ಖಾತೆಯನ್ನು ನಿರ್ವಹಿಸುವ ಮರುಮಾರಾಟಗಾರರು ನಿಮ್ಮ Google ಖಾತೆಗೆ ಪ್ರವೇಶ ಹೊಂದಿರುತ್ತಾರೆ. ಅವರಿಗೆ ಈ ಕೆಳಗಿನವುಗಳನ್ನು ಮಾಡಲು ಸಾಧ್ಯವಾಗಬಹುದು:

- ನಿಮ್ಮ ಖಾತೆಯಲ್ಲಿ ಸಂಗ್ರಹಣೆ ಮಾಡಿರುವ, ಇಮೇಲ್‌ನಂತಹ ಮಾಹಿತಿಗೆ ಪ್ರವೇಶ ಪಡೆಯುವುದು ಮತ್ತು ಅದನ್ನು ಉಳಿಸಿಕೊಳ್ಳುವುದು
- ನಿಮ್ಮ ಖಾತೆಯ ಕುರಿತು ಅಂಕಿಅಂಶಗಳನ್ನು ವೀಕ್ಷಿಸುವುದು, ಉದಾಹರಣೆಗೆ, ನೀವು ಎಷ್ಟು ಅಪ್ಲಿಕೇಶನ್‌ಗಳನ್ನು ಇನ್‌ಸ್ಟಾಲ್ ಮಾಡುತ್ತೀರಿ.
- ನಿಮ್ಮ ಖಾತೆಯ ಪಾಸ್‌ವರ್ಡ್ ಬದಲಿಸುವುದು
- ನಿಮ್ಮ ಖಾತೆಗೆ ಪ್ರವೇಶವನ್ನು ಅಮಾನತುಗೊಳಿಸುವುದು ಅಥವಾ ಕೊನೆಗೊಳಿಸುವುದು
- ಅನ್ವಯವಾಗುವ ಕಾನೂನು, ನಿಯಮ, ಕಾನೂನು ಪ್ರಕ್ರಿಯೆ ಅಥವಾ ಜಾರಿಗೊಳಿಸಬಹುದಾದ ಸರಕಾರಿ ವಿನಂತಿಯನ್ನು ಪೂರೈಸುವ ಸಲುವಾಗಿ ನಿಮ್ಮ ಖಾತೆಯ ಮಾಹಿತಿಯನ್ನು ಸ್ವೀಕರಿಸಬಹುದು.
- ನಿಮ್ಮ ಮಾಹಿತಿ ಅಥವಾ ನಿಮ್ಮ ಗೌಪ್ಯತೆ ಸೆಟ್ಟಿಂಗ್ಗಳನ್ನು ಅಳಿಸುವ ಅಥವಾ ಎಡಿಟ್ ಮಾಡುವ ನಿಮ್ಮ ಸಾಮರ್ಥ್ಯವನ್ನು ನಿರ್ಬಂಧಿಸುವುದು

## ಬಾಹ್ಯ ಪ್ರಕ್ರಿಯೆಗಾಗಿ

ನಮ್ಮ ಸೂಚನೆಗಳ ಮೇರೆಗೆ ಮತ್ತು ನಮ್ಮ ಗೌಪ್ಯತೆ ನೀತಿ ಹಾಗೂ ಇತರ ಯಾವುದೇ ಸೂಕ್ತ ಗೌಪ್ಯತೆ ಹಾಗೂ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ವೈಯಕ್ತಿಕ ಮಾಹಿತಿಯನ್ನು ನಮಗಾಗಿ ಪ್ರಕ್ರಿಯೆಗೊಳಪಡಿಸುವುದಕ್ಕಾಗಿ ಅದನ್ನು ನಮ್ಮ ಸಹಭಾಗಿತ್ವದ ಸಂಸ್ಥೆಗಳು ಮತ್ತು ಇತರ ವ್ಯಾಪಾರ ಸಂಸ್ಥೆಗಳು ಅಥವಾ ವ್ಯಕ್ತಿಗಳಿಗೆ ಒದಗಿಸುತ್ತೇವೆ. ಉದಾಹರಣೆಗೆ, ಗ್ರಾಹಕ ಬೆಂಬಲಕ್ಕಾಗಿ ನಾವು ಸೇವಾ ಪೂರೈಕೆದಾರರ ಸಹಾಯ ಪಡೆಯುತ್ತೇವೆ.

## ಕಾನೂನು ಕಾರಣಗಳಿಗಾಗಿ

ವೈಯಕ್ತಿಕ ಮಾಹಿತಿಯನ್ನು ಪ್ರವೇಶಿಸುವುದು, ಬಳಸುವುದು, ಕಾಪಾಡುವುದು ಅಥವಾ ಬಹಿರಂಗಪಡಿಸುವುದು ಈ ಕೆಳಗಿನ ಕಾರಣಗಳಿಗಾಗಿ ಸಮಂಜಸವಾಗಿ ಅಗತ್ಯವೆಂಬ ನಂಬಿಕೆಯನ್ನು ನಾವು ಹೊಂದಿದ್ದಲ್ಲಿ, ಅದನ್ನು Google ನ ಹೊರಗೆ ಹಂಚಿಕೊಳ್ಳುತ್ತೇವೆ:

- ಅನ್ವಯಿಸುವ ಯಾವುದೇ ಕಾನೂನು, ನಿಯಮ, ಕಾನೂನು ಪ್ರಕ್ರಿಯೆ ಅಥವಾ ಜಾರಿಗೊಳಿಸಬಹುದಾದ ಸರಕಾರಿ ಕೋರಿಕೆಯನ್ನು ಪೂರೈಸಲು. ನಾವು ಸರಕಾರಗಳಿಂದ ಪಡೆಯುವ ಕೋರಿಕೆಗಳ ಸಂಖ್ಯೆ ಮತ್ತು ವಿಧದ ಕುರಿತಾದ ಮಾಹಿತಿಯನ್ನು ನಮ್ಮ ಪಾರದರ್ಶಕತೆ ವರದಿಯಲ್ಲಿ ಹಂಚಿಕೊಳ್ಳುತ್ತೇವೆ.
- ಸಂಭಾವ್ಯ ಉಲ್ಲಂಘನೆಗಳ ಕುರಿತಾದ ತನಿಖೆಯೂ ಸೇರಿದಂತೆ ಅನ್ವಯಿಸುವ ಸೇವಾ ನಿಯಮಗಳನ್ನು ಜಾರಿಗೊಳಿಸಲು.
- ವಂಚನೆ, ಸುರಕ್ಷತೆ ಅಥವಾ ತಾಂತ್ರಿಕ ಸಮಸ್ಯೆಗಳನ್ನು ಪತ್ತೆಹಚ್ಚಲು, ತಡೆಗಟ್ಟಲು ಇಲ್ಲವೇ ಬಗೆಹರಿಸಲು.

- ಕಾನೂನಿನ ಆವಶ್ಯಕತೆಯ ಮೇರೆಗೆ ಅಥವಾ ಅನುಮತಿಯ ಮೇರೆಗೆ, Google, ನಮ್ಮ ಬಳಕೆದಾರರು ಅಥವಾ ಸಾರ್ವಜನಿಕರ ಹಕ್ಕುಗಳು, ಆಸ್ತಿ ಅಥವಾ ಸುರಕ್ಷತೆಗೆ ಹಾನಿಯಾಗದಂತೆ ಸಂರಕ್ಷಿಸಲು.

ವೈಯಕ್ತಿಕವಾಗಿ ಗುರುತಿಸದ ಮಾಹಿತಿಯನ್ನು ನಾವು ಸಾರ್ವಜನಿಕವಾಗಿ ಮತ್ತು ನಮ್ಮ ಪಾಲುದಾರರೊಂದಿಗೆ — ಅಂದರೆ ಪ್ರಕಾಶಕರೊಂದಿಗೆ, ಜಾಹೀರಾತುದಾರರೊಂದಿಗೆ, ಡೆವಲಪರ್‌ಗಳೊಂದಿಗೆ ಅಥವಾ ಹಕ್ಕುದಾರರೊಂದಿಗೆ ಹಂಚಿಕೊಳ್ಳಬಹುದು. ಉದಾಹರಣೆಗೆ, ನಮ್ಮ ಸೇವೆಗಳ ಸಾಮಾನ್ಯ ಬಳಕೆಯ ಟ್ರೆಂಡ್‌ಗಳನ್ನು ತೋರಿಸಲು ನಾವು ಮಾಹಿತಿಯನ್ನು ಸಾರ್ವಜನಿಕವಾಗಿ ಹಂಚಿಕೊಳ್ಳುತ್ತೇವೆ. ಜಾಹೀರಾತು ಅಥವಾ ಮಾಪನದ ಉದ್ದೇಶಗಳಿಗಾಗಿ, ನಿರ್ದಿಷ್ಟ ಪಾಲುದಾರರು ನಿಮ್ಮ ಬ್ರೌಸರ್ ಅಥವಾ ಸಾಧನದಿಂದ, ಅವರದೇ ಆದ ಕುಕೀಗಳು ಅಥವಾ ಅಂತಹುದೇ ತಂತ್ರಜ್ಞಾನಗಳನ್ನು ಬಳಸಿ ಮಾಹಿತಿ ಸಂಗ್ರಹಿಸಲು ಕೂಡಾ ನಾವು ಅವಕಾಶ ನೀಡುತ್ತೇವೆ.

ಒಂದು ವೇಳೆ Google ವಿಲೀನ, ಸ್ವಾಧೀನ ಅಥವಾ ಸ್ವತ್ತುಗಳ ಮಾರಾಟದಲ್ಲಿ ತೊಡಗಿಕೊಂಡರೆ, ನಿಮ್ಮ ವೈಯಕ್ತಿಕ ಮಾಹಿತಿಯ ಗೌಪ್ಯತೆಯನ್ನು ಖಚಿತಪಡಿಸುವುದನ್ನು ನಾವು ಮುಂದುವರಿಸುತ್ತೇವೆ ಮತ್ತು ವೈಯಕ್ತಿಕ ಮಾಹಿತಿಯನ್ನು ವರ್ಗಾಯಿಸುವ ಮೊದಲು ಅಥವಾ ಅದು ಬೇರೆ ಗೌಪ್ಯತೆ ನೀತಿಗೆ ಒಳಪಡುವ ಮೊದಲು, ಸಂಬಂಧಿತ ಬಳಕೆದಾರರಿಗೆ ಸೂಚನೆ ನೀಡುತ್ತೇವೆ.

---

ನಿಮ್ಮ ಮಾಹಿತಿಯನ್ನು ಸುರಕ್ಷಿತವಾಗಿರಿಸುವುದು

# ನಿಮ್ಮ ಮಾಹಿತಿಯನ್ನು ಸುರಕ್ಷಿತವಾಗಿರಿಸಲು, ನಮ್ಮ ಸೇವೆಗಳಲ್ಲಿ ನಾವು ಸುರಕ್ಷಾ ಕ್ರಮಗಳನ್ನು ಅಳವಡಿಸುತ್ತೇವೆ

ಎಲ್ಲಾ Google ಉತ್ಪನ್ನಗಳನ್ನು ಪ್ರಬಲವಾದ ಸುರಕ್ಷತಾ ವೈಶಿಷ್ಟ್ಯಗಳೊಂದಿಗೆ ನಿರ್ಮಿಸಲಾಗಿದೆ ಮತ್ತು ಅವು ನಿಮ್ಮ ಮಾಹಿತಿಯನ್ನು ನಿರಂತರವಾಗಿ ಸಂರಕ್ಷಿಸುತ್ತವೆ. ನಮ್ಮ ಸೇವೆಗಳ ನಿರ್ವಹಣೆಯ ಮೂಲಕ ನಾವು ಪಡೆದುಕೊಳ್ಳುವ ಒಳನೋಟಗಳು, ಸುರಕ್ಷತಾ ಬೆದರಿಕೆಗಳನ್ನು ಪತ್ತೆಹಚ್ಚಲು ಮತ್ತು ಅವು ನಿಮ್ಮನ್ನು ತಲುಪದಂತೆ ಸ್ವಯಂಚಾಲಿತವಾಗಿ ನಿರ್ಬಂಧಿಸಲು ನಮಗೆ ಸಹಾಯ ಮಾಡುತ್ತವೆ. ಮತ್ತು ನಾವು ಯಾವುದೇ ಅಪಾಯಕಾರಿ ವಿಚಾರವನ್ನು ಪತ್ತೆಹಚ್ಚಿದರೆ ಮತ್ತು ಅದರ ಕುರಿತು ನಿಮಗೆ ತಿಳಿಯಬೇಕು ಎಂದು ನಮಗೆ ಅನಿಸಿದರೆ, ನಾವು ನಿಮಗೆ ಸೂಚನೆ ನೀಡುತ್ತೇವೆ ಮತ್ತು ಹೆಚ್ಚಿನ ಸಂರಕ್ಷಣೆ ಪಡೆಯಲು ನೀವು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮಾರ್ಗದರ್ಶನ ನೀಡುತ್ತೇವೆ.

ಈ ಕೆಳಗಿನವುಗಳೂ ಸೇರಿದಂತೆ ಅನಧಿಕೃತ ಪ್ರವೇಶ, ಮಾರ್ಪಾಡು, ಬಹಿರಂಗಪಡಿಸುವಿಕೆ ಅಥವಾ ನಮ್ಮ ಸುಪರ್ದಿಯಲ್ಲಿರುವ ಮಾಹಿತಿಯ ನಾಶದಿಂದ ನಿಮ್ಮನ್ನು ಮತ್ತು Google ಅನ್ನು ಸಂರಕ್ಷಿಸಲು ನಾವು ಶ್ರಮವಹಿಸಿ ಕೆಲಸ ಮಾಡುತ್ತೇವೆ:

- ನಿಮ್ಮ ಡೇಟಾವನ್ನು ರವಾನಿಸುವಾಗ, ಅದರ ಗೌಪ್ಯತೆಯನ್ನು ಕಾಪಾಡಲು ನಾವು ಎನ್‌ಕ್ರಿಪ್ಷನ್ ಬಳಸುತ್ತೇವೆ
- ನಿಮ್ಮ ಖಾತೆಯನ್ನು ಸಂರಕ್ಷಿಸಲು, ನಾವು ಸುರಕ್ಷಿತ ಬ್ರೌಸಿಂಗ್, ಸುರಕ್ಷತಾ ಚೆಕ್-ಅಪ್ ಮತ್ತು 2 ಹಂತದ ಪರಿಶೀಲನೆಯಂತಹ ಸುರಕ್ಷತಾ ವೈಶಿಷ್ಟ್ಯಗಳನ್ನು ಒದಗಿಸುತ್ತೇವೆ
- ನಮ್ಮ ಸಿಸ್ಟಂಗಳಿಗೆ ಅನಧಿಕೃತ ಪ್ರವೇಶವನ್ನು ತಡೆಗಟ್ಟುವುದಕ್ಕಾಗಿ, ಭೌತಿಕ ಸುರಕ್ಷತಾ ಕ್ರಮಗಳೂ ಸೇರಿದಂತೆ ನಮ್ಮ ಮಾಹಿತಿ ಸಂಗ್ರಹ, ಸಂಗ್ರಹಣೆ ಮತ್ತು ಪ್ರಕ್ರಿಯೆಗೊಳಿಸುವಿಕೆ ಅಭ್ಯಾಸಗಳನ್ನು ಪರಿಶೀಲಿಸುತ್ತೇವೆ
- ವೈಯಕ್ತಿಕ ಮಾಹಿತಿಯನ್ನು ಪ್ರಕ್ರಿಯೆಗೆ ಒಳಪಡಿಸಲು, ಅದರ ಆವಶ್ಯಕತೆಯಿರುವ Google ಉದ್ಯೋಗಿಗಳು, ಗುತ್ತಿಗೆದಾರರು ಮತ್ತು ಏಜೆಂಟ್‌ಗಳಿಗೆ ಮಾತ್ರ ಅದನ್ನು ಪ್ರವೇಶಿಸಲು ಅವಕಾಶ ನೀಡಿದ್ದೇವೆ. ಇಂತಹ ಪ್ರವೇಶದ ಅವಕಾಶವನ್ನು

ಹೊಂದಿರುವವರು, ಕಟ್ಟುನಿಟ್ಟಾದ ಗೌಪ್ಯತೆಯ ಹೊಣೆಗಾರಿಕೆಗಳಿಗೆ ಒಳಪಟ್ಟಿರುತ್ತಾರೆ ಮತ್ತು ಅವರು ಈ ಬಾಧ್ಯತೆಗಳನ್ನು ಪೂರೈಸಲು ವಿಫಲರಾದಲ್ಲಿ ಅವರನ್ನು ಶಿಸ್ತುಕ್ರಮಕ್ಕೆ ಗುರಿಪಡಿಸಬಹುದು ಅಥವಾ ಉದ್ಯೋಗವನ್ನು ಕೊನೆಗೊಳಿಸಬಹುದು.

---

ನಿಮ್ಮ ಮಾಹಿತಿಯನ್ನು ರಫ್ತು ಮಾಡುವುದು ಮತ್ತು ಅಳಿಸುವುದು

## ನಿಮ್ಮ Google ಖಾತೆಯಿಂದ ನಿಮ್ಮ ಮಾಹಿತಿಯ ನಕಲನ್ನು ನೀವು ಯಾವಾಗ ಬೇಕಾದರೂ ರಫ್ತು ಮಾಡಬಹುದು ಅಥವಾ ಆ ಮಾಹಿತಿಯನ್ನು ಅಲ್ಲಿಂದ ಅಳಿಸಬಹುದು

ಬ್ಯಾಕಪ್ ಮಾಡಬೇಕಿದ್ದರೆ ಅಥವಾ Google ಗೆ ಹೊರತಾದ ಸೇವೆಯಲ್ಲಿ ಅದನ್ನು ಬಳಸಬೇಕಿದ್ದರೆ, ನಿಮ್ಮ Google ಖಾತೆಯಲ್ಲಿನ ವಿಷಯದ ನಕಲನ್ನು ರಫ್ತು ಮಾಡಬಹುದು.

---

ನಿಮ್ಮ ಡೇಟಾವನ್ನು ರಫ್ತು ಮಾಡಿ

---

ನಿಮ್ಮ ಮಾಹಿತಿಯನ್ನು ಅಳಿಸಲು, ನೀವು ಹೀಗೆ ಮಾಡಬಹುದು:

- ನಿರ್ದಿಷ್ಟ Google ಸೇವೆಗಳಿಂದ ನಿಮ್ಮ ವಿಷಯವನ್ನು ಅಳಿಸುವುದು
- ನನ್ನ ಚಟುವಟಿಕೆ ಬಳಸಿ, ನಿಮ್ಮ ಖಾತೆಯಲ್ಲಿ ನಿರ್ದಿಷ್ಟ ಐಟಂಗಳನ್ನು ಹುಡುಕುವುದು ಮತ್ತು ಅಳಿಸುವುದು
- ನಿರ್ದಿಷ್ಟ Google ಉತ್ಪನ್ನಗಳನ್ನು ಅಳಿಸುವುದು, ಜೊತೆಗೆ ಆ ಉತ್ಪನ್ನದೊಂದಿಗೆ ಸಂಯೋಜಿಸಿರುವ ನಿಮ್ಮ ಮಾಹಿತಿಯನ್ನು ಅಳಿಸುವುದು
- ನಿಮ್ಮ ಸಂಪೂರ್ಣ Google ಖಾತೆಯನ್ನು ಅಳಿಸುವುದು

---

ನಿಮ್ಮ ಮಾಹಿತಿಯನ್ನು ಅಳಿಸುವುದು

---

ನಿಮ್ಮ ಮಾಹಿತಿಯನ್ನು ಉಳಿಸಿಕೊಳ್ಳಲಾಗುತ್ತಿದೆ

ಮಾಹಿತಿಯು ಯಾವುದಕ್ಕೆ ಸಂಬಂಧಿಸಿದೆ, ಅದನ್ನು ನಾವು ಹೇಗೆ ಬಳಸುತ್ತೇವೆ ಮತ್ತು ನಿಮ್ಮ ಸೆಟ್ಟಿಂಗ್‌ಗಳನ್ನು ನೀವು ಹೇಗೆ ಕಾನ್ಫಿಗರ್ ಮಾಡುತ್ತೀರಿ ಎಂಬುದರ ಆಧಾರದ ಮೇಲೆ ಬೇರೆ ಬೇರೆ ನಿಗದಿತ ಅವಧಿಗಳಲ್ಲಿ ಸಂಗ್ರಹಿಸಿದ ಡೇಟಾವನ್ನು ನಾವು ಉಳಿಸಿಕೊಳ್ಳುತ್ತೇವೆ:

- ನೀವು ರಚಿಸಿದ ಅಥವಾ ಅಪ್‌ಲೋಡ್ ಮಾಡಿದ ವಿಷಯದಂತಹ, ಕೆಲವು ಡೇಟಾವನ್ನು ನೀವು ಯಾವಾಗ ಬೇಕಾದರೂ ಅಳಿಸಬಹುದು. ನಿಮ್ಮ ಖಾತೆಯಲ್ಲಿ ಉಳಿಸಿದ ಚಟುವಟಿಕೆ ಮಾಹಿತಿ ಅನ್ನು ಸಹ ನೀವು ಅಳಿಸಬಹುದು ಅಥವಾ ನಿಗದಿತ ಅವಧಿಯ ನಂತರ ಅದನ್ನು ಸ್ವಯಂಚಾಲಿತವಾಗಿ ಅಳಿಸುವಂತೆ ಸಹ ನೀವು ಆಯ್ಕೆಮಾಡಬಹುದು.

- ನಿಗದಿತ ಅವಧಿಯ ನಂತರ ಇತರ ಡೇಟಾವನ್ನು ಉದಾಹರಣೆಗೆ, ಸರ್ವರ್ ಲಾಗ್‌ಗಳಲ್ಲಿನ ಜಾಹೀರಾತಿನ ಡೇಟಾ ವನ್ನು ಸ್ವಯಂಚಾಲಿತವಾಗಿ ಅಳಿಸಲಾಗುತ್ತದೆ ಅಥವಾ ಅನಾಮಧೇಯಗೊಳಿಸಲಾಗುತ್ತದೆ. .

- ನಮ್ಮ ಸೇವೆಗಳನ್ನು ನೀವು ಎಷ್ಟು ಬಾರಿ ಬಳಸುತ್ತೀರಿ ಎಂಬುದರ ಕುರಿತಾದ ಮಾಹಿತಿಯಂತಹ ಕೆಲವು ಡೇಟಾವನ್ನು ನಿಮ್ಮ Google ಖಾತೆಯನ್ನು ನೀವು ಅಳಿಸುವವರೆಗೂ ನಾವು ಇರಿಸಿಕೊಳ್ಳುತ್ತೇವೆ.

- ಕಾನೂನುಬದ್ಧ ವ್ಯಾಪಾರಕ್ಕಾಗಿ ಅಥವಾ ಭದ್ರತೆ, ವಂಚನೆ ಮತ್ತು ದುರುಪಯೋಗ ತಡೆಗಟ್ಟುವಿಕೆಯಂತಹ ಕಾನೂನು ಉದ್ದೇಶಗಳಿಗಾಗಿ ಅಥವಾ ಹಣಕಾಸಿನ ದಾಖಲೆಯನ್ನು ಇರಿಸಿಕೊಳ್ಳುವುದಕ್ಕಾಗಿ ಕೆಲವು ಡೇಟಾದ ಅವಶ್ಯಕತೆ ಇದ್ದಾಗ, ನಿಗದಿತ ಅವಧಿಗಿಂತ ಹೆಚ್ಚು ಸಮಯದವರೆಗೆ ನಾವು ಆ ಡೇಟಾವನ್ನು ಉಳಿಸಿಕೊಳ್ಳುತ್ತೇವೆ.

ನೀವು ಡೇಟಾವನ್ನು ಅಳಿಸಿದಾಗ, ನಿಮ್ಮ ಡೇಟಾವನ್ನು ಸುರಕ್ಷಿತವಾಗಿ ಮತ್ತು ಸಂಪೂರ್ಣವಾಗಿ ನಮ್ಮ ಸರ್ವರ್‌ಗಳಿಂದ ತೆಗೆದುಹಾಕಲಾಗಿದೆ ಅಥವಾ ಕೇವಲ ಅನಾಮಧೇಯ ಫಾರ್ಮ್‌ನಲ್ಲಿ ನಂತರದ ಬಳಕೆಗಾಗಿ ಉಳಿಸಿಟ್ಟುಕೊಳ್ಳಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ನಾವು ಅಳಿಸುವಿಕೆ ಪ್ರಕ್ರಿಯೆಯನ್ನು ಅನುಸರಿಸುತ್ತೇವೆ. ನಮ್ಮ ಸೇವೆಗಳು, ಆಕಸ್ಮಿಕವಾಗಿ ಅಥವಾ ದುರುದ್ದೇಶಪೂರಿತವಾಗಿ ಮಾಹಿತಿಯ ಅಳಿಸುವಿಕೆಯನ್ನು ತಡೆಯುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ನಾವು ಪ್ರಯತ್ನಿಸುತ್ತೇವೆ. ಇದರಿಂದಾಗಿ, ನಮ್ಮ ಸಕ್ರಿಯ ಮತ್ತು ಬ್ಯಾಕಪ್ ಸಿಸ್ಟಂಗಳಲ್ಲಿನ ಮಾಹಿತಿಯನ್ನು ನೀವು ಅಳಿಸುವ ಸಮಯ ಮತ್ತು ಅದರ ನಕಲುಗಳನ್ನು ಅಳಿಸುವ ಸಮಯದ ನಡುವೆ ವಿಳಂಬ ಉಂಟಾಗಬಹುದು.

ನಿಮ್ಮ ಮಾಹಿತಿಯನ್ನು ಅಳಿಸಲು ನಮಗೆ ಎಷ್ಟು ಸಮಯ ಬೇಕಾಗುತ್ತದೆ ಎಂಬುದು ಸೇರಿದಂತೆ, Google ನ ಡೇಟಾ ಉಳಿಸಿಕೊಳ್ಳುವಿಕೆ ಅವಧಿಯ ಕುರಿತು ನೀವು ಇನ್ನಷ್ಟು ತಿಳಿದುಕೊಳ್ಳಬಹುದು.

---

ನಿಯಂತ್ರಕರೊಂದಿಗೆ ಅನುಸರಣೆ ಮತ್ತು ಸಹಕಾರ

ನಾವು ಈ ಗೌಪ್ಯತೆ ನೀತಿಯನ್ನು ನಿಯಮಿತವಾಗಿ ಪರಿಶೀಲಿಸುತ್ತೇವೆ ಮತ್ತು ಅದನ್ನು ಅನುಸರಿಸುವ ರೀತಿಯಲ್ಲೇ ನಾವು ನಿಮ್ಮ ಮಾಹಿತಿಯನ್ನು ಪ್ರಕ್ರಿಯೆಗೊಳಪಡಿಸುತ್ತಿದ್ದೇವೆ ಎಂಬುದನ್ನು ಖಚಿತಪಡಿಸಿಕೊಳ್ಳುತ್ತೇವೆ.

## ಡೇಟಾ ವರ್ಗಾವಣೆಗಳು

ನಾವು ಜಗತ್ತಿನಾದ್ಯಂತ ಸರ್ವರ್‌ಗಳನ್ನು ನಿರ್ವಹಿಸುತ್ತೇವೆ ಮತ್ತು ನಿಮ್ಮ ಮಾಹಿತಿಯನ್ನು, ನೀವು ವಾಸಿಸುವ ದೇಶದ ಹೊರಗಿನ ಸ್ಥಳಗಳಲ್ಲಿರುವ ಸರ್ವರ್‌ಗಳಲ್ಲಿ ಪ್ರಕ್ರಿಯೆಗೊಳಪಡಿಸಬಹುದಾಗಿದೆ. ಡೇಟಾ ಸಂರಕ್ಷಣೆಯ ಕಾನೂನುಗಳು ದೇಶದಿಂದ ದೇಶಕ್ಕೆ ಬದಲಾಗುತ್ತವೆ, ಅಂದರೆ ಕೆಲವು ದೇಶಗಳು ಇತರ ದೇಶಗಳಿಗಿಂತ ಹೆಚ್ಚಿನ ಸಂರಕ್ಷಣೆಯನ್ನು ಒದಗಿಸುತ್ತವೆ. ನಿಮ್ಮ ಮಾಹಿತಿಯನ್ನು ಎಲ್ಲಿ ಪ್ರಕ್ರಿಯೆಗೊಳಪಡಿಸಿದರೂ ಕೂಡಾ, ನಾವು ಈ ಕಾರ್ಯನೀತಿಯಲ್ಲಿ ವಿವರಿಸಿರುವ ಸಂರಕ್ಷಣೆಗಳನ್ನೇ ಅನ್ವಯಿಸುತ್ತೇವೆ. ಡೇಟಾ ವರ್ಗಾವಣೆಗೆ ಸಂಬಂಧಿಸಿದಂತೆ, ನಾವು ಕೆಲವು ಕಾನೂನು ಚೌಕಟ್ಟುಗಳನ್ನು ಅನುಸರಿಸುತ್ತೇವೆ, ಉದಾಹರಣೆಗೆ, EU-U.S. ಮತ್ತು Swiss-U.S. ಗೌಪ್ಯತೆ ಶೀಲ್ಡ್ ಫ್ರೇಮ್‌ವರ್ಕ್‌ಗಳು.

ನಾವು ಔಪಚಾರಿಕವಾಗಿ ಲಿಖಿತ ದೂರುಗಳನ್ನು ಸ್ವೀಕರಿಸಿದರೆ, ಅದನ್ನು ಅನುಸರಿಸುವ ಸಲುವಾಗಿ ದೂರು ನೀಡಿದ ವ್ಯಕ್ತಿಯನ್ನು ಸಂಪರ್ಕಿಸುತ್ತೇವೆ. ನಾವು ನೇರವಾಗಿ ನಿಮ್ಮೊಂದಿಗೆ ಪರಿಹರಿಸಲು ಸಾಧ್ಯವಿಲ್ಲದಂತಹ, ನಿಮ್ಮ ಡೇಟಾ ವರ್ಗಾವಣೆಗೆ ಸಂಬಂಧಿಸಿದ ಯಾವುದೇ ದೂರುಗಳನ್ನು ಪರಿಹರಿಸಲು ಸ್ಥಳೀಯ ಡೇಟಾ ರಕ್ಷಣೆ ಪ್ರಾಧಿಕಾರಗಳು ಸೇರಿದಂತೆ, ಸೂಕ್ತವಾದ ನಿಯಂತ್ರಣ ಪ್ರಾಧಿಕಾರಗಳ ಜೊತೆಗೆ ಕಾರ್ಯನಿರ್ವಹಿಸುತ್ತೇವೆ.

# ಐರೋಪ್ಯ ಆವಶ್ಯಕತೆಗಳು

ನಿಮ್ಮ ಮಾಹಿತಿಯನ್ನು ಪ್ರಕ್ರಿಯೆಗೆ ಒಳಪಡಿಸುವುದಕ್ಕೆ ಐರೋಪ್ಯ ಒಕ್ಕೂಟದ (EU) ಅಥವಾ ಯುನೈಟೆಂಡ್ ಕಿಂಗ್‌ಡಮ್ (UK) ಡೇಟಾ ಸಂರಕ್ಷಣೆ ಕಾನೂನು ಅನ್ವಯಿಸಿದರೆ, ಈ ಕಾರ್ಯನೀತಿಯಲ್ಲಿ ವಿವರಿಸಿದ ನಿಯಂತ್ರಣಗಳನ್ನು ನಾವು ಒದಗಿಸುತ್ತೇವೆ. ಈ ಮೂಲಕ ನಿಮ್ಮ ಮಾಹಿತಿಗೆ ಪ್ರವೇಶ ಕೋರಲು, ಅಪ್‌ಡೇಟ್ ಮಾಡಲು, ತೆಗೆದುಹಾಕಲು ಮತ್ತು ಪ್ರಕ್ರಿಯೆಗೊಳಪಡಿಸುವುದನ್ನು ನಿರ್ಬಂಧಿಸಲು ನಿಮಗಿರುವ ಹಕ್ಕನ್ನು ನೀವು ಉಪಯೋಗಿಸಿಕೊಳ್ಳಬಹುದು. ನಿಮ್ಮ ಮಾಹಿತಿಯನ್ನು ಪ್ರಕ್ರಿಯೆಗೊಳಪಡಿಸುವುದಕ್ಕೆ ಅಥವಾ ನಿಮ್ಮ ಮಾಹಿತಿಯನ್ನು ಬೇರೊಂದು ಸೇವೆಗೆ ರಫ್ತು ಮಾಡುವುದಕ್ಕೆ ಆಕ್ಷೇಪಿಸುವ ಹಕ್ಕು ಕೂಡಾ ನಿಮಗಿದೆ.

ಐರೋಪ್ಯ ವಾಣಿಜ್ಯ ಪ್ರದೇಶ ಅಥವಾ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ನೆಲೆಸಿರುವ ಬಳಕೆದಾರರಿಗಾಗಿ, ಸೇವಾ ನಿರ್ದಿಷ್ಟ ಗೌಪ್ಯತೆ ಸೂಚನೆಯಲ್ಲಿ ಸ್ಪಷ್ಟವಾಗಿ ತಿಳಿಸಿರದ ಹೊರತು, ನಿಮ್ಮ ಮಾಹಿತಿಯ ಜವಾಬ್ದಾರರಾಗಿರುವ ಡೇಟಾ ನಿಯಂತ್ರಕರು Google Ireland Limited ಆಗಿರುತ್ತಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ, Google Ireland Limited ನಿಮ್ಮ ಮಾಹಿತಿಯನ್ನು ಪ್ರಕ್ರಿಯೆಗೊಳಿಸುವ ಮತ್ತು ಅನ್ವಯವಾಗುವ ಕಾನೂನು ನಿಯಮಗಳಿಗೆ ಅನುಸಾರವಾಗಿ ಹೊಣೆಗಾರನಾಗಿರುವ Google ಅಂಗಸಂಸ್ಥೆಯಾಗಿದೆ.

ಈ ಕೆಳಗಿನ ಕಾನೂನು ನೆಲೆಯಲ್ಲಿ, ಈ ಕಾರ್ಯನೀತಿಯಲ್ಲಿ ವಿವರಿಸಿದ ಉದ್ದೇಶಗಳಿಗಾಗಿ ನಾವು ನಿಮ್ಮ ಮಾಹಿತಿಯನ್ನು ಪ್ರಕ್ರಿಯೆಗೊಳಪಡಿಸುತ್ತೇವೆ:

## ನಿಮ್ಮ ಸಮ್ಮತಿಯೊಂದಿಗೆ

ನಿರ್ದಿಷ್ಟ ಉದ್ದೇಶಗಳಿಗಾಗಿ ನಿಮ್ಮ ಮಾಹಿತಿಯನ್ನು ಪ್ರಕ್ರಿಯೆಗೊಳಿಸಲು ನಿಮ್ಮ ಒಪ್ಪಿಗೆಯನ್ನು ನಾವು ಕೇಳುತ್ತೇವೆ ಮತ್ತು ನೀವು ಯಾವಾಗ ಬೇಕಾದರೂ ನಿಮ್ಮ ಸಮ್ಮತಿಯನ್ನು ಹಿಂಪಡೆಯುವ ಹಕ್ಕು ನಿಮಗಿದೆ. ಉದಾಹರಣೆಗೆ, ನಿಮ್ಮ ಆಸಕ್ತಿಗಳ ಆಧಾರದ ಮೇಲೆ ಜಾಹೀರಾತುಗಳನ್ನು ತೋರಿಸುವಂತಹ ವೈಯಕ್ತಿಕಗೊಳಿಸಿದ ಸೇವೆಗಳನ್ನು ನಿಮಗೆ ಒದಗಿಸಲು ನಿಮ್ಮ ಸಮ್ಮತಿಯನ್ನು ನಾವು ಕೇಳುತ್ತೇವೆ. ಧ್ವನಿಯನ್ನು ಗುರುತಿಸುವುದಕ್ಕಾಗಿ ನಿಮ್ಮ ಧ್ವನಿ ಮತ್ತು ಆಡಿಯೋ ಚಟುವಟಿಕೆಯನ್ನು ಸಂಗ್ರಹಿಸಲು ಸಹ ನಾವು ನಿಮ್ಮ ಸಮ್ಮತಿಯನ್ನು ಕೇಳುತ್ತೇವೆ. ನಿಮ್ಮ Google ಖಾತೆಯಲ್ಲಿ ನೀವು ಈ ಸೆಟ್ಟಿಂಗ್‌ಗಳನ್ನು ನಿರ್ವಹಿಸಬಹುದು.

## ನಾವು ಕಾನೂನುಬದ್ಧ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳುವ ಉದ್ದೇಶಗಳನ್ನು ಹೊಂದಿದ್ದಾಗ

ನಮ್ಮ ಮತ್ತು ಥರ್ಡ್ ಪಾರ್ಟಿಗಳ ಕಾನೂನುಬದ್ಧ ಹಿತಾಸಕ್ತಿಗಳಿಗಾಗಿ ನಾವು ನಿಮ್ಮ ಮಾಹಿತಿಯನ್ನು ಪ್ರಕ್ರಿಯೆಗೊಳಿಸುತ್ತೇವೆ. ಅದಕ್ಕಾಗಿ, ನಿಮ್ಮ ಗೌಪ್ಯತೆಯನ್ನು ಕಾಪಾಡುವ ಸೂಕ್ತ ಸುರಕ್ಷಾ ಕ್ರಮಗಳನ್ನು ಅನ್ವಯಿಸುತ್ತೇವೆ. ಇದರರ್ಥ, ಈ ಕೆಳಗಿನವುಗಳಂತಹ ವಿಷಯಗಳಿಗಾಗಿ ನಾವು ನಿಮ್ಮ ಮಾಹಿತಿಯನ್ನು ಪ್ರಕ್ರಿಯೆಗೊಳಿಸುತ್ತೇವೆ:

- ನಮ್ಮ ಬಳಕೆದಾರರ ಆವಶ್ಯಕತೆಗಳನ್ನು ಪೂರೈಸಲು ನಮ್ಮ ಸೇವೆಗಳನ್ನು ಒದಗಿಸಲು, ನಿರ್ವಹಿಸಲು ಮತ್ತು ಸುಧಾರಿಸಲು

- ನಮ್ಮ ಬಳಕೆದಾರರಿಗೆ ಉಪಯುಕ್ತವಾದ ಹೊಸ ಉತ್ಪನ್ನಗಳು ಹಾಗೂ ವೈಶಿಷ್ಟ್ಯಗಳನ್ನು ಅಭಿವೃದ್ಧಿಪಡಿಸಲು
- ನಮ್ಮ ಸೇವೆಗಳ ಕಾರ್ಯದಕ್ಷತೆಯನ್ನು ಖಚಿತಪಡಿಸಲು ಮತ್ತು ಸುಧಾರಿಸಲು, ಜನರು ನಮ್ಮ ಸೇವೆಗಳನ್ನು ಹೇಗೆ ಬಳಸುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು
- ನಿಮಗೆ ಇನ್ನೂ ಉತ್ತಮವಾದ ಬಳಕೆದಾರ ಅನುಭವವನ್ನು ಒದಗಿಸುವುದಕ್ಕಾಗಿ ನಮ್ಮ ಸೇವೆಗಳನ್ನು ಗ್ರಾಹಕೀಕರಿಸಲು
- ನಮ್ಮ ಸೇವೆಗಳ ಕುರಿತು ಬಳಕೆದಾರರಿಗೆ ತಿಳಿಸುವುದಕ್ಕಾಗಿ ಮಾರ್ಕೆಟಿಂಗ್ ಮಾಡಲು
- ಜಾಹೀರಾತನ್ನು ನೀಡುವುದರಿಂದ, ನಮ್ಮ ಹಲವಾರು ಸೇವೆಗಳು ನಿಮಗೆ ಉಚಿತವಾಗಿ ದೊರೆಯುತ್ತವೆ (ಮತ್ತು ಜಾಹೀರಾತುಗಳನ್ನು ವೈಯಕ್ತಿಕಗೊಳಿಸಿದಾಗ, ನಾವು ನಿಮ್ಮ ಸಮ್ಮತಿಯನ್ನು ಕೇಳುತ್ತೇವೆ)
- ನಮ್ಮ ಸೇವೆಗಳಲ್ಲಿ ವಂಚನೆ, ದುರ್ಬಳಕೆ, ಸುರಕ್ಷತೆ ಅಥವಾ ತಾಂತ್ರಿಕ ಸಮಸ್ಯೆಗಳನ್ನು ಪತ್ತೆಹಚ್ಚಲು, ತಡೆಗಟ್ಟಲು ಅಥವಾ ಬಗೆಹರಿಸಲು
- ಸರ್ಕಾರಿ ಅಧಿಕಾರಿಗಳಿಗೆ ಮಾಹಿತಿಯನ್ನು ಬಹಿರಂಗಪಡಿಸುವಿಕೆಯು ಒಳಗೊಂಡಂತೆ, ಕಾನೂನಿನ ಅವಶ್ಯಕತೆಯ ಮೇರೆಗೆ ಅಥವಾ ಅನುಮತಿಯ ಮೇರೆಗೆ, Google, ನಮ್ಮ ಬಳಕೆದಾರರು ಅಥವಾ ಸಾರ್ವಜನಿಕರ ಹಕ್ಕುಗಳು, ಆಸ್ತಿಪಾಸ್ತಿ ಅಥವಾ ಸುರಕ್ಷತೆಗೆ ಹಾನಿಯಾಗದಂತೆ ಸಂರಕ್ಷಿಸುವುದು
- ನಮ್ಮ ಬಳಕೆದಾರರಿಗಾಗಿ ನಮ್ಮ ಸೇವೆಗಳನ್ನು ಸುಧಾರಿಸುವ ಮತ್ತು ಸಾರ್ವಜನಿಕರಿಗೆ ಉಪಯುಕ್ತವಾಗುವ ಸಂಶೋಧನೆಯನ್ನು ನಡೆಸಲು
- ಡೆವಲಪರ್‌ಗಳು ಮತ್ತು ಹಕ್ಕುದಾರರಂತಹ ನಮ್ಮ ಪಾಲುದಾರರಿಗಾಗಿ ನಮ್ಮ ಹೊಣೆಗಾರಿಕೆಗಳನ್ನು ಪೂರೈಸಲು
- ಅನ್ವಯಿಸುವ ಸೇವಾ ನಿಯಮಗಳ ಸಂಭಾವ್ಯ ಉಲ್ಲಂಘನೆಯ ತನಿಖೆಯೂ ಸೇರಿದಂತೆ, ಕಾಯ್ದೆಬದ್ಧ ಕ್ಲೈಮ್ಗಳನ್ನು ಜಾರಿಗೊಳಿಸಲು

## ನಾವು ಸೇವೆಯನ್ನು ಒದಗಿಸುತ್ತಿರುವಾಗ

ಒಂದು ಒಪ್ಪಂದದ ಅಡಿಯಲ್ಲಿ ನೀವು ಕೇಳಿರುವ ಸೇವೆಯನ್ನು ಒದಗಿಸುವುದಕ್ಕಾಗಿ ನಾವು ನಿಮ್ಮ ಡೇಟಾವನ್ನು ಪ್ರಕ್ರಿಯೆಗೊಳಿಸುತ್ತೇವೆ. ಉದಾಹರಣೆಗೆ, ನೀವು Google ಡ್ರೈವ್‌ಗಾಗಿ ಹೆಚ್ಚುವರಿ ಸಂಗ್ರಹಣೆಯನ್ನು ವಿನಂತಿಸಿದಾಗ ನಿಮ್ಮ ಪಾವತಿ ಮಾಹಿತಿಯನ್ನು ನಾವು ಪ್ರಕ್ರಿಯೆಗೊಳಿಸುತ್ತೇವೆ.

## ನಾವು ಕಾನೂನು ಹೊಣೆಗಾರಿಕೆಗಳನ್ನು ಪೂರೈಸುತ್ತಿರುವಾಗ

ನಿಮ್ಮ ಡೇಟಾವನ್ನು ಪ್ರಕ್ರಿಯೆಗೊಳಿಸಲು ನಮಗೆ ಕಾನೂನು ಹೊಣೆಗಾರಿಕೆ ಇರುವಾಗ, ನಾವು ಅದನ್ನು ಅನುಸರಿಸುತ್ತೇವೆ. ಉದಾಹರಣೆಗೆ, ಕಾನೂನು ಪ್ರಕ್ರಿಯೆ ಅಥವಾ ಜಾರಿಗೊಳಿಸಬಹುದಾದ ಸರಕಾರಿ ಕೋರಿಕೆ.

ನಿಮ್ಮಲ್ಲಿ ಪ್ರಶ್ನೆಗಳಿದ್ದರೆ, ನೀವು Google ಮತ್ತು ನಮ್ಮ ಡೇಟಾ ಸಂರಕ್ಷಣೆ ಕಚೇರಿಯನ್ನು ಸಂಪರ್ಕಿಸಬಹುದು. ಮತ್ತು ಸ್ಥಳೀಯ ಕಾನೂನಿನ ಅಡಿಯಲ್ಲಿ ನಿಮ್ಮ ಹಕ್ಕುಗಳ ಕುರಿತು ನಿಮಗೇನಾದರೂ ಆತಂಕಗಳಿದ್ದರೆ, ನಿಮ್ಮ ಸ್ಥಳೀಯ ಡೇಟಾ ಸಂರಕ್ಷಣೆ ಅಧಿಕಾರಿಯನ್ನು ನೀವು ಸಂಪರ್ಕಿಸಬಹುದು.

---

ಈ ಕಾರ್ಯನೀತಿಯ ಕುರಿತು

## ಈ ಕಾರ್ಯನೀತಿ ಯಾವಾಗ ಅನ್ವಯವಾಗುತ್ತದೆ

YouTube, Android ಮತ್ತು ಥರ್ಡ್-ಪಾರ್ಟಿ ಸೈಟ್‌ಗಳಲ್ಲಿ ಒದಗಿಸುವ ಜಾಹೀರಾತುಗಳಂತಹ ಸೇವೆಗಳೂ ಸೇರಿದಂತೆ Google LLC ಮತ್ತು ಅದರ ಸಹಭಾಗಿತ್ವದ ಸಂಸ್ಥೆಗಳು ಒದಗಿಸುವ ಎಲ್ಲಾ ಸೇವೆಗಳಿಗೆ ಈ ಗೌಪ್ಯತೆ ನೀತಿಯು ಅನ್ವಯಿಸುತ್ತದೆ. ಈ ಗೌಪ್ಯತೆ ನೀತಿಯನ್ನು ಅಳವಡಿಸದ, ಪ್ರತ್ಯೇಕ ಗೌಪ್ಯತೆ ನೀತಿಗಳನ್ನು ಹೊಂದಿರುವ ಸೇವೆಗಳಿಗೆ ಈ ಗೌಪ್ಯತೆ ನೀತಿಯು ಅನ್ವಯಿಸುವುದಿಲ್ಲ.

ಈ ಗೌಪ್ಯತೆ ನೀತಿಯು ಇವುಗಳಿಗೆ ಅನ್ವಯಿಸುವುದಿಲ್ಲ:

- ನಮ್ಮ ಸೇವೆಗಳ ಕುರಿತು ಪ್ರಚಾರ ಮಾಡುವ ಇತರ ಕಂಪನಿಗಳು ಮತ್ತು ಸಂಸ್ಥೆಗಳ ಮಾಹಿತಿ ಅಭ್ಯಾಸಗಳು
- Google ಸೇವೆಗಳನ್ನು ಒಳಗೊಂಡಿರಬಹುದಾದ, ಹುಡುಕಾಟ ಫಲಿತಾಂಶಗಳಲ್ಲಿ ನಿಮಗೆ ಪ್ರದರ್ಶಿಸಬಹುದಾದ ಅಥವಾ ನಮ್ಮ ಸೇವೆಗಳಿಂದ ಲಿಂಕ್ ಮಾಡಿರಬಹುದಾದ ಉತ್ಪನ್ನಗಳು ಅಥವಾ ಸೈಟ್‌ಗಳು ಸೇರಿದಂತೆ, ಇತರ ಕಂಪನಿಗಳು ಅಥವಾ ವ್ಯಕ್ತಿಗಳು ಒದಗಿಸುವ ಸೇವೆಗಳು

## ಈ ಕಾರ್ಯನೀತಿಯಲ್ಲಿನ ಬದಲಾವಣೆಗಳು

ಈ ಕಾರ್ಯನೀತಿಯನ್ನು ನಾವು ಕಾಲಕಾಲಕ್ಕೆ ಬದಲಾಯಿಸುತ್ತೇವೆ. ನಿಮ್ಮ ಸ್ಪಷ್ಟ ಸಮ್ಮತಿ ಇಲ್ಲದೆಯೇ, ಈ ಗೌಪ್ಯತಾ ನೀತಿಯ ಅಡಿಯಲ್ಲಿ ನಿಮ್ಮ ಹಕ್ಕುಗಳನ್ನು ನಾವು ಮೊಟಕುಗೊಳಿಸುವುದಿಲ್ಲ. ಬದಲಾವಣೆಗಳನ್ನು ಪ್ರಕಟಿಸಿದ ಇತ್ತೀಚಿನ ದಿನಾಂಕವನ್ನು ನಾವು ಯಾವಾಗಲೂ ಸೂಚಿಸುತ್ತೇವೆ ಮತ್ತು ನಿಮ್ಮ ಪರಿಶೀಲನೆಗಾಗಿ, ನಾವು ಆರ್ಕೈವ್ ಮಾಡಿರುವ ಆವೃತ್ತಿಗಳಿಗೆ ಪ್ರವೇಶ ಒದಗಿಸುತ್ತೇವೆ. ಬದಲಾವಣೆಗಳು ಗಮನಾರ್ಹವಾಗಿದ್ದಲ್ಲಿ, ಹೆಚ್ಚುಗಣನೀಯವಾದ ಸೂಚನಾಪತ್ರವನ್ನು(ಕೆಲವು ಸೇವೆಗಳಲ್ಲಿ, ಗೌಪ್ಯತೆ ನೀತಿಯ ಬದಲಾವಣೆಗಳ ಕುರಿತು ಇಮೇಲ್ ಅಧಿಸೂಚನೆಯೂ ಸೇರಿದಂತೆ) ನಾವು ನೀಡುತ್ತೇವೆ.

---

ಸಂಬಂಧಿತ ಗೌಪ್ಯತೆಯ ರೂಢಿಗಳು

## ನಿರ್ದಿಷ್ಟ Google ಸೇವೆಗಳು

ಈ ಕೆಳಗಿನ ಗೌಪ್ಯತೆ ಸೂಚನೆಯು ಕೆಲವು Google ಸೇವೆಗಳ ಕುರಿತು ಹೆಚ್ಚುವರಿ ಮಾಹಿತಿಯನ್ನು ಒದಗಿಸುತ್ತದೆ:

- Chrome ಮತ್ತು Chrome ಆಪರೇಟಿಂಗ್ ಸಿಸ್ಟಮ್

- Payments
- Fiber
- Google Fi
- ಶಿಕ್ಷಣಕ್ಕಾಗಿ G Suite
- Read Along
- YouTube ಕಿಡ್ಸ್
- 13 ವರ್ಷಕ್ಕಿಂತ ಕಡಿಮೆ ವಯಸ್ಸಿನ (ಅಥವಾ ನಿಮ್ಮ ದೇಶದಲ್ಲಿ ಅನ್ವಯವಾಗುವ ವಯಸ್ಸು) ಮಕ್ಕಳಿಗಾಗಿ, Family Link ಮೂಲಕ ನಿರ್ವಹಿಸಲ್ಪಟ್ಟ Google ಖಾತೆಗಳು
- Google ಅಸಿಸ್ಟೆಂಟ್‌ನಲ್ಲಿ ಮಕ್ಕಳ ವೈಶಿಷ್ಟ್ಯಗಳನ್ನು ಬಳಸಿಕೊಂಡು ಸಂಗ್ರಹಿಸಲಾದ ಧ್ವನಿ ಮತ್ತು ಆಡಿಯೊ

## ಇತರ ಉಪಯುಕ್ತ ಸಂಪನ್ಮೂಲಗಳು

ನಮ್ಮ ರೂಢಿಗಳು ಮತ್ತು ಗೌಪ್ಯತೆ ಸೆಟ್ಟಿಂಗ್‌ಗಳ ಕುರಿತು ಇನ್ನಷ್ಟು ತಿಳಿಯಲು ಉಪಯುಕ್ತವಾದ ಸಂಪನ್ಮೂಲಗಳನ್ನು ಈ ಕೆಳಗಿನ ಲಿಂಕ್‌ಗಳು ಹೈಲೈಟ್ ಮಾಡುತ್ತವೆ.

- ನಿಮ್ಮ ಖಾತೆಯನ್ನು ನಿರ್ವಹಿಸುವುದಕ್ಕೆ ಬೇಕಾದ ಹಲವಾರು ಸೆಟ್ಟಿಂಗ್‌ಗಳು ನಿಮ್ಮ Google ಖಾತೆಯಲ್ಲೇ ಇವೆ
- ನಿಮ್ಮ Google ಖಾತೆಗಾಗಿ ಪ್ರಮುಖ ಗೌಪ್ಯತೆ ಸೆಟ್ಟಿಂಗ್‌ಗಳ ಕುರಿತು ಗೌಪ್ಯತೆ ಚೆಕ್-ಅಪ್ ನಿಮಗೆ ಮಾರ್ಗದರ್ಶನ ನೀಡುತ್ತದೆ
- Google ನ ಸುರಕ್ಷತೆ ಕೇಂದ್ರ, ಇದು ನಿಮ್ಮ ಕುಟುಂಬಕ್ಕಾಗಿ ಆನ್‌ಲೈನ್‌ನಲ್ಲಿ ಮೂಲಭೂತ ಡಿಜಿಟಲ್ ನಿಯಮಗಳನ್ನು ಹೊಂದಿಸುವುದಕ್ಕೆ ಸಹಾಯ ಮಾಡುವ ನಿಟ್ಟಿನಲ್ಲಿ, ನಮ್ಮ ಅಂತರ್ನಿರ್ಮಿತ ಸುರಕ್ಷತೆ, ಗೌಪ್ಯತೆ ನಿಯಂತ್ರಣಗಳು ಮತ್ತು ಪರಿಕರಗಳ ಕುರಿತು ಇನ್ನಷ್ಟು ತಿಳಿದುಕೊಳ್ಳಲು ನಿಮಗೆ ಸಹಾಯ ಮಾಡುತ್ತದೆ
- ಈ ಗೌಪ್ಯತೆ ನೀತಿ ಮತ್ತು ನಮ್ಮ ಸೇವಾ ನಿಯಮಗಳ ಕುರಿತು ಗೌಪ್ಯತೆ ಮತ್ತು ನಿಯಮಗಳು ಹೆಚ್ಚಿನ ಸಾಂದರ್ಭಿಕ ಮಾಹಿತಿಯನ್ನು ಒದಗಿಸುತ್ತದೆ
- ತಂತ್ರಜ್ಞಾನಗಳು ಈ ಕುರಿತು ಹೆಚ್ಚಿನ ಮಾಹಿತಿಯನ್ನು ಒಳಗೊಂಡಿರುತ್ತವೆ:
    - Google ಕುಕೀಗಳನ್ನು ಹೇಗೆ ಬಳಸುತ್ತದೆ
    - ಜಾಹೀರಾತಿಗಾಗಿ ಬಳಸುವ ತಂತ್ರಜ್ಞಾನಗಳು
    - ಫೋಟೋಗಳಲ್ಲಿ ಮುಖಗಳನ್ನು ಗುರುತಿಸುವಂತಹ ಸಂಗತಿಗಳಿಗಾಗಿ Google ವಿನ್ಯಾಸ ಗುರುತಿಸುವಿಕೆಯನ್ನು ಹೇಗೆ ಬಳಸುತ್ತದೆ

- [ನಮ್ಮ ಸೇವೆಗಳನ್ನು ಬಳಸುವ ಸೈಟ್‌ಗಳು ಅಥವಾ ಅಪ್ಲಿಕೇಶನ್‌ಗಳಿಂದ ಮಾಹಿತಿಯನ್ನು Google ಹೇಗೆ ಬಳಸಿಕೊಳ್ಳುತ್ತದೆ]

---

## ಕೀ ಪದಗಳು

### ಅಂಗಸಂಸ್ಥೆಗಳು

ಅಂಗಸಂಸ್ಥೆ ಎಂದರೆ Google ಸಮೂಹದ ಕಂಪನಿಗಳಿಗೆ ಸೇರಿರುವ ಒಂದು ಸಂಸ್ಥೆಯಾಗಿದೆ. EU ನಲ್ಲಿ ಗ್ರಾಹಕ ಸೇವೆಗಳನ್ನು ಒದಗಿಸುವ ಈ ಕೆಳಗಿನ ಸಂಸ್ಥೆಗಳು ಸಹ ಇದರಲ್ಲಿ ಸೇರಿರುತ್ತವೆ: Google Ireland Limited, Google Commerce Ltd, Google Payment Corp, ಮತ್ತು Google Dialer Inc. EU ನಲ್ಲಿ ವ್ಯಾಪಾರ ಸೇವೆಗಳನ್ನು ಒದಗಿಸುತ್ತಿರುವ ಕಂಪನಿಗಳ ಕುರಿತು ಇನ್ನಷ್ಟು ತಿಳಿಯಿರಿ.

### ಅನನ್ಯ ಗುರುತುಗಳು

ಅನನ್ಯ ಗುರುತು ಎಂದರೆ ಒಂದು ಬ್ರೌಸರ್, ಅಪ್ಲಿಕೇಶನ್ ಅಥವಾ ಸಾಧನವನ್ನು ಅನನ್ಯವಾಗಿ ಗುರುತಿಸಲು ಬಳಸಬಹುದಾದಂತಹ ಅಕ್ಷರಗಳ ಸ್ಟ್ರಿಂಗ್ ಆಗಿರುತ್ತದೆ. ವಿವಿಧ ಗುರುತುಗಳು, ಅವು ಎಷ್ಟು ಶಾಶ್ವತ, ಅವುಗಳನ್ನು ಬಳಕೆದಾರರು ಮರುಹೊಂದಿಸಬಹುದೇ ಮತ್ತು ಅವುಗಳಿಗೆ ಹೇಗೆ ಪ್ರವೇಶಿಸಬಹುದು ಎಂಬುದನ್ನು ಅವಲಂಬಿಸಿ ಭಿನ್ನವಾಗಿರುತ್ತವೆ.

ಸುರಕ್ಷತೆಯನ್ನು ಖಚಿತಪಡಿಸಲು ಮತ್ತು ವಂಚನೆಯನ್ನು ಪತ್ತೆಹಚ್ಚಲು, ನಿಮ್ಮ ಇಮೇಲ್ ಇನ್‌ಬಾಕ್ಸ್‌ನಂತಹ ಸೇವೆಗಳನ್ನು ಸಿಂಕ್ ಮಾಡಲು, ನಿಮ್ಮ ಆದ್ಯತೆಗಳನ್ನು ನೆನಪಿಡಲು ಮತ್ತು ವೈಯಕ್ತೀಕರಿಸಿದ ಜಾಹೀರಾತುಗಳನ್ನು ಒದಗಿಸಲು ಅನನ್ಯ ಗುರುತುಗಳನ್ನು ಬಳಸಬಹುದು. ಉದಾಹರಣೆಗೆ, ಕುಕೀಗಳಲ್ಲಿ ಸಂಗ್ರಹಣೆ ಮಾಡಿರುವ ಅನನ್ಯ ಗುರುತುಗಳು, ನಿಮ್ಮ ಬ್ರೌಸರ್‌ನಲ್ಲಿರುವ ವಿಷಯವನ್ನು ನಿಮ್ಮ ಆದ್ಯತೆಯ ಭಾಷೆಯಲ್ಲಿ ಪ್ರದರ್ಶಿಸಲು ಸಹಾಯ ಮಾಡುತ್ತವೆ. ಎಲ್ಲಾ ಕುಕೀಗಳನ್ನು ನಿರಾಕರಿಸುವಂತೆ ಅಥವಾ ಕುಕೀಯನ್ನು ಕಳುಹಿಸಿದಾಗ ಸೂಚನೆ ನೀಡುವಂತೆ ನಿಮ್ಮ ಬ್ರೌಸರ್ ಅನ್ನು ನೀವು ಕಾನ್ಫಿಗರ್ ಮಾಡಬಹುದು. Google ಕುಕೀಗಳನ್ನು ಹೇಗೆ ಬಳಸುತ್ತದೆ ಎಂಬ ಕುರಿತು ಇನ್ನಷ್ಟು ತಿಳಿಯಿರಿ.

ಬ್ರೌಸರ್‌ಗಳಲ್ಲದೆ ಇತರ ಪ್ಲಾಟ್‌ಫಾರ್ಮ್‌ಗಳಲ್ಲಿ, ಆ ಸಾಧನದಲ್ಲಿ ನಿರ್ದಿಷ್ಟ ಸಾಧನವನ್ನು ಅಥವಾ ಅಪ್ಲಿಕೇಶನ್ ಅನ್ನು ಗುರುತಿಸಲು ಅನನ್ಯ ಗುರುತುಗಳನ್ನು ಬಳಸಲಾಗುತ್ತದೆ. ಉದಾಹರಣೆಗೆ, ಜಾಹೀರಾತು ಐಡಿಯಂತಹ ಅನನ್ಯ ಗುರುತನ್ನು Android ಸಾಧನಗಳಲ್ಲಿ ಸೂಕ್ತ ಜಾಹೀರಾತುಗಳನ್ನು ಒದಗಿಸಲು ಬಳಸಲಾಗುತ್ತದೆ ಮತ್ತು ಅದನ್ನು ನಿಮ್ಮ ಸಾಧನದ ಸೆಟ್ಟಿಂಗ್‌ಗಳಲ್ಲಿ ನಿರ್ವಹಿಸಬಹುದು. ಅನನ್ಯ ಗುರುತುಗಳನ್ನು, ಸಾಧನದ ತಯಾರಕರು ಸಾಧನದಲ್ಲಿ ಅಳವಡಿಸಬಹುದು (ಇದನ್ನು ಕೆಲವೊಮ್ಮೆ ಸಾರ್ವತ್ರಿಕ ಅನನ್ಯ ಐಡಿ ಅಥವಾ UUID ಎಂದು ಕರೆಯಲಾಗುತ್ತದೆ), ಉದಾಹರಣೆಗೆ ಮೊಬೈಲ್ ಫೋನ್‌ನ IMEI-ಸಂಖ್ಯೆ. ಉದಾಹರಣೆಗೆ, ನಿಮ್ಮ ಸಾಧನಕ್ಕಾಗಿ ನಮ್ಮ ಸೇವೆಯನ್ನು ಕಸ್ಟಮೈಸ್ ಮಾಡಲು ಅಥವಾ ನಮ್ಮ ಸೇವೆಗಳಿಗೆ ಸಂಬಂಧಪಟ್ಟಂತೆ ಸಾಧನದ ಸಮಸ್ಯೆಗಳನ್ನು ವಿಶ್ಲೇಷಿಸಲು, ಸಾಧನದ ಅನನ್ಯ ಗುರುತನ್ನು ಬಳಸಬಹುದು.

### ಅಪ್ಲಿಕೇಶನ್ ಡೇಟಾ ಸಂಗ್ರಹಣೆ

ಅಪ್ಲಿಕೇಶನ್ ಡೇಟಾ ಸಂಗ್ರಹಣೆ ಎಂಬುದು ಸಾಧನದಲ್ಲಿರುವ ಒಂದು ಡೇಟಾ ಭಂಡಾರವಾಗಿದೆ. ಉದಾಹರಣೆಗೆ, ವೆಬ್ ಅಪ್ಲಿಕೇಶನ್ ಇಂಟರ್ನೆಟ್‌ನ ಸಂಪರ್ಕವಿಲ್ಲದೆಯೇ ರನ್ ಆಗಲು ಸಶಕ್ತಗೊಳಿಸುತ್ತದೆ. ಜೊತೆಗೆ ವಿಷಯ ತ್ವರಿತಗತಿಯಲ್ಲಿ ಲೋಡ್ ಆಗುವಂತೆ ಮಾಡುವ ಮೂಲಕ ಅಪ್ಲಿಕೇಶನ್‌ನ ಕಾರ್ಯಕ್ಷಮತೆಯನ್ನು ಇನ್ನಷ್ಟು ಸುಧಾರಿಸಬಹುದು.

## ಅಲ್ಗಾರಿದಮ್

ಸಮಸ್ಯೆ ಪರಿಹಾರ ಕಾರ್ಯಾಚರಣೆಗಳನ್ನು ನಡೆಸುವಾಗ ಕಂಪ್ಯೂಟರ್ ಅನುಸರಿಸುವ ಪ್ರಕ್ರಿಯೆ ಅಥವಾ ನಿಯಮಗಳ ಗುಂಪು.

## ಕುಕೀಗಳು

ಕುಕೀ ಎಂದರೆ, ನೀವು ವೆಬ್‌ಸೈಟ್‌ಗೆ ಭೇಟಿ ನೀಡಿದಾಗ ನಿಮ್ಮ ಕಂಪ್ಯೂಟರ್‌ಗೆ ಕಳುಹಿಸಲಾಗುವ, ಅಕ್ಷರಗಳ ಸ್ಟ್ರಿಂಗ್ ಅನ್ನು ಒಳಗೊಂಡಿರುವ ಸಣ್ಣ ಫೈಲ್ ಆಗಿರುತ್ತದೆ. ನೀವು ವೆಬ್‌ಸೈಟ್‌ಗೆ ಮತ್ತೆ ಭೇಟಿ ನೀಡಿದಾಗ, ಆ ಸೈಟ್‌ಗೆ ನಿಮ್ಮ ಬ್ರೌಸರ್ ಅನ್ನು ಗುರುತಿಸಲು ಕುಕೀ ಅನುವು ಮಾಡಿಕೊಡುತ್ತದೆ. ಕುಕೀಗಳು ಬಳಕೆದಾರರ ಆದ್ಯತೆಗಳು ಮತ್ತು ಇತರ ಮಾಹಿತಿಯನ್ನು ಸಂಗ್ರಹಿಸಬಹುದು. ಎಲ್ಲಾ ಕುಕೀಗಳನ್ನು ನಿರಾಕರಿಸುವಂತೆ ಅಥವಾ ಕುಕೀಯನ್ನು ಕಳುಹಿಸಿದಾಗ ಸೂಚನೆ ನೀಡುವಂತೆ ನಿಮ್ಮ ಬ್ರೌಸರ್ ಅನ್ನು ನೀವು ಕಾನ್ಫಿಗರ್ ಮಾಡಬಹುದು. ಆದರೂ, ಕೆಲವು ವೆಬ್‌ಸೈಟ್ ವೈಶಿಷ್ಟ್ಯಗಳು ಅಥವಾ ಸೇವೆಗಳು ಕುಕೀಗಳಿಲ್ಲದೆ ಸರಿಯಾಗಿ ಕಾರ್ಯನಿರ್ವಹಿಸದಿರಬಹುದು. Google ಕುಕೀಗಳನ್ನು ಹೇಗೆ ಬಳಸುತ್ತದೆ ಮತ್ತು ನಮ್ಮ ಪಾಲುದಾರರ ಸೈಟ್‌ಗಳು ಅಥವಾ ಅಪ್ಲಿಕೇಶನ್‌ಗಳನ್ನು ನೀವು ಬಳಸಿದಾಗ ಕುಕೀಗಳನ್ನು ಒಳಗೊಂಡಂತೆ ಡೇಟಾವನ್ನು Google ಹೇಗೆ ಬಳಸಿಕೊಳ್ಳುತ್ತದೆ ಎನ್ನುವುದರ ಕುರಿತು ಇನ್ನಷ್ಟು ತಿಳಿಯಿರಿ.

## ಪಿಕ್ಸೆಲ್ ಟ್ಯಾಗ್

ಪಿಕ್ಸೆಲ್ ಟ್ಯಾಗ್ ಎಂದರೆ ವೆಬ್‌ಸೈಟ್‌ನ ವೀಕ್ಷಣೆಗಳು ಅಥವಾ ಇಮೇಲ್ ಅನ್ನು ಯಾವಾಗ ತೆರೆಯಲಾಗಿದೆ ಎಂಬಂತಹ ನಿರ್ದಿಷ್ಟ ಚಟುವಟಿಕೆಗಳನ್ನು ಟ್ರ್ಯಾಕ್ ಮಾಡಲು ವೆಬ್‌ಸೈಟ್‌ನಲ್ಲಿ ಅಥವಾ ಇಮೇಲ್‌ನ ವಿವರಣೆ ವಿಭಾಗದಲ್ಲಿ ಇರಿಸಲಾಗುವ ಒಂದು ರೀತಿಯ ತಂತ್ರಜ್ಞಾನವಾಗಿದೆ. ಪಿಕ್ಸೆಲ್ ಟ್ಯಾಗ್‌ಗಳನ್ನು ಹೆಚ್ಚಾಗಿ ಕುಕೀಗಳೊಂದಿಗೆ ಬಳಸಲಾಗುತ್ತದೆ.

## ಬ್ರೌಸರ್ ವೆಬ್ ಸಂಗ್ರಹಣೆ

ಬ್ರೌಸರ್ ವೆಬ್ ಸಂಗ್ರಹಣೆಯು ಬ್ರೌಸರ್‌ನಲ್ಲಿರುವ ಡೇಟಾವನ್ನು ಸಾಧನದಲ್ಲಿ ಸಂಗ್ರಹಿಸಲು ವೆಬ್‌ಸೈಟ್‌ಗಳನ್ನು ಸಕ್ರಿಯಗೊಳಿಸುತ್ತದೆ. "ಸ್ಥಳೀಯ ಸಂಗ್ರಹಣೆ" ಮೋಡ್‌ನಲ್ಲಿ ಬಳಸಿದಾಗ, ಅದು ಸೆಶನ್‌ಗಳಾದ್ಯಂತ ಡೇಟಾವನ್ನು ಸಂಗ್ರಹಣೆ ಮಾಡಲು ಅವಕಾಶ ನೀಡುತ್ತದೆ. ಬ್ರೌಸರ್ ಅನ್ನು ಮುಚ್ಚಿ, ಪುನಃ ತೆರೆದ ನಂತರವೂ ಡೇಟಾವನ್ನು ಪಡೆದುಕೊಳ್ಳುವುದನ್ನು ಇದು ಸಾಧ್ಯವಾಗಿಸುತ್ತದೆ. ವೆಬ್ ಸಂಗ್ರಹಣೆಯನ್ನು ಸುಗಮಗೊಳಿಸುವ ಒಂದು ತಂತ್ರಜ್ಞಾನವೆಂದರೆ, ಅದು HTML 5.

## ರೆಫರರ್ URL

ರೆಫರರ್ URL (ಯುನಿಫಾರ್ಮ್ ರಿಸೋರ್ಸ್ ಲೊಕೇಟರ್) ಎಂದರೆ, ಸಾಮಾನ್ಯವಾಗಿ ನೀವು ಒಂದು ಪುಟದ ಲಿಂಕ್ ಅನ್ನು ಕ್ಲಿಕ್ ಮಾಡುವಾಗ, ಗಮ್ಯ ವೆಬ್‌ಪುಟಕ್ಕೆ ವೆಬ್ ಬ್ರೌಸರ್ ರವಾನಿಸುವ ಮಾಹಿತಿ ಇದಾಗಿರುತ್ತದೆ. ಕೊನೆಯದಾಗಿ ಭೇಟಿ ನೀಡಿದ ಬ್ರೌಸರ್‌ನ URL ಅನ್ನು ರೆಫರರ್ URL ಹೊಂದಿರುತ್ತದೆ.

### ವೈಯಕ್ತಿಕ ಮಾಹಿತಿ

ಇದು ನೀವು ನಮಗೆ ಒದಗಿಸುವ, ನಿಮ್ಮನ್ನು ವೈಯಕ್ತಿಕವಾಗಿ ಗುರುತಿಸುವ ಮಾಹಿತಿಯಾಗಿರುತ್ತದೆ. ಅಂದರೆ, ನಿಮ್ಮ ಹೆಸರು, ಇಮೇಲ್ ವಿಳಾಸ ಅಥವಾ ಬಿಲ್ಲಿಂಗ್ ಮಾಹಿತಿ ಅಥವಾ ಇಂತಹ ಮಾಹಿತಿಗೆ Google, ಸೂಕ್ತವಾಗಿ ಲಿಂಕ್ ಮಾಡಬಹುದಾದ ಇತರ ಡೇಟಾ ಆಗಿರುತ್ತದೆ. ಉದಾಹರಣೆಗೆ, ನಿಮ್ಮ Google ಖಾತೆಯೊಂದಿಗೆ ನಾವು ಸಂಯೋಜಿಸುವ ಮಾಹಿತಿ.

### ವೈಯುಕ್ತಿಕವಲ್ಲದ ಗುರುತಿಸಬಹುದಾದ ಮಾಹಿತಿ

ಇದು ವೈಯಕ್ತಿಕವಾಗಿ-ಗುರುತಿಸಬಹುದಾದ ಬಳಕೆದಾರನನ್ನು ಪ್ರತಿಬಿಂಬಿಸದಂತೆ ಅಥವಾ ಉಲ್ಲೇಖಿಸದಂತೆ ದಾಖಲಿಸಲಾಗುವ, ಬಳಕೆದಾರರ ಕುರಿತಾದ ಮಾಹಿತಿಯಾಗಿದೆ.

### ಸರ್ವರ್ ಲಾಗ್‌ಗಳು

ಹೆಚ್ಚಿನ ವೆಬ್‌ಸೈಟ್‌ಗಳಂತೆ, ನಮ್ಮ ಸೈಟ್‌ಗಳನ್ನು ನೀವು ಭೇಟಿ ಮಾಡಿದಾಗ ನಮ್ಮ ಸರ್ವರ್‌ಗಳು ಪುಟದ ವಿನಂತಿಗಳನ್ನು ಸ್ವಯಂಚಾಲಿತವಾಗಿ ದಾಖಲಿಸುತ್ತದೆ. ಈ " ಸರ್ವರ್ ಲಾಗ್‌ಗಳು" ಪ್ರಾತಿನಿಧಿಕವಾಗಿ ನಿಮ್ಮ ವೆಬ್ ವಿನಂತಿ, ಇಂಟರ್ನೆಟ್ ಪ್ರೊಟೋಕಾಲ್ ವಿಳಾಸ, ಬ್ರೌಸರ್ ಪ್ರಕಾರ, ಬ್ರೌಸರ್ ಭಾಷೆ, ನಿಮ್ಮ ವಿನಂತಿಯ ದಿನಾಂಕ ಮತ್ತು ಸಮಯವು ಸೇರಿದಂತೆ ಮತ್ತು ಒಂದು ಅಥವಾ ಹೆಚ್ಚಿನ ಕುಕೀಸ್ ನಿಮ್ಮ ಬ್ರೌಸರ್ ಅನ್ನು ಅನನ್ಯವಾಗಿ ಗುರುತಿಸಬಹುದಾಗಿದೆ.

"ಕಾರುಗಳು" ಎಂದು ಹುಡುಕಾಟ ನಡೆಸಿದಾಗ ಸೃಷ್ಟಿಯಾಗುವ ಸಾಮಾನ್ಯ ಲಾಗ್ ನಮೂದು ಹೀಗಿರುತ್ತದೆ:

```
123.45.67.89 - 25/Mar/2003 10:15:32 -
http://www.google.com/search?q=cars -
Firefox 1.0.7; Windows NT 5.1 -
740674ce2123e969
```

- `123.45.67.89` ಇದು ಬಳಕೆದಾರನ ISP ಯು ಬಳಕೆದಾರನಿಗೆ ನಿಗದಿಪಡಿಸುವ ಇಂಟರ್ನೆಟ್ ಪ್ರೊಟೊಕಾಲ್ ವಿಳಾಸವಾಗಿರುತ್ತದೆ. ಬಳಕೆದಾರನ ಸೇವೆಯನ್ನು ಆಧರಿಸಿ, ಅವರು ಪ್ರತಿ ಬಾರಿ ಇಂಟರ್ನೆಟ್‌ಗೆ ಸಂಪರ್ಕಿಸಿದಾಗಲೂ ಅವರ ಸೇವಾ ಪೂರೈಕೆದಾರರು ಬಳಕೆದಾರರಿಗೆ ವಿಭಿನ್ನ ವಿಳಾಸವನ್ನು ನಿಗದಿಪಡಿಸಬಹುದು.
- `25/Mar/2003 10:15:32` ಇದು ಪ್ರಶ್ನೆಯ ದಿನಾಂಕ ಮತ್ತು ಸಮಯವಾಗಿರುತ್ತದೆ.
- `http://www.google.com/search?q=cars` ಇದು ಹುಡುಕಾಟದ ಪ್ರಶ್ನೆಯನ್ನು ಒಳಗೊಂಡಿರುವ, ವಿನಂತಿಸಿದ URL ಆಗಿರುತ್ತದೆ.
- `Firefox 1.0.7; Windows NT 5.1` ಇದು ಬಳಸಲಾಗುತ್ತಿರುವ ಬ್ರೌಸರ್ ಮತ್ತು ಆಪರೇಟಿಂಗ್ ಸಿಸ್ಟಂ ಆಗಿರುತ್ತದೆ.

- `740674ce2123a969` ಇದು, ಈ ನಿರ್ದಿಷ್ಟ ಕಂಪ್ಯೂಟರ್ ಮೊದಲ ಬಾರಿ Google ಗೆ ಭೇಟಿ ನೀಡಿದಾಗ, ಅದಕ್ಕೆ ನಿಗದಿಪಡಿಸಿದ ಅನನ್ಯ ಕುಕೀ ಐಡಿಯಾಗಿರುತ್ತದೆ. (ಕುಕೀಗಳನ್ನು ಬಳಕೆದಾರರು ಅಳಿಸಬಹುದು. Google ಗೆ ಭೇಟಿ ನೀಡಿದ ಬಳಿಕ, ಬಳಕೆದಾರರು ಕಂಪ್ಯೂಟರ್‌ನಿಂದ ಕುಕೀಯನ್ನು ಅಳಿಸಿದ್ದರೆ, ಅವರು ಆ ನಿರ್ದಿಷ್ಟ ಸಾಧನದಿಂದ ಮುಂದಿನ ಬಾರಿ Google ಗೆ ಭೇಟಿ ನೀಡಿದಾಗ, ಅವರ ಸಾಧನಕ್ಕೆ ನಿಗದಿಪಡಿಸಿದ ಅನನ್ಯ ಕುಕೀ ಐಡಿ ಇದಾಗಿರುತ್ತದೆ).

### ಸಾಧನ

ಸಾಧನವು ಕಂಪ್ಯೂಟರ್ ಆಗಿದ್ದು Google ಸೇವೆಗಳಿಗೆ ಪ್ರವೇಶಿಸಲು ಅದನ್ನು ಬಳಸಬಹುದಾಗಿರುತ್ತದೆ. ಉದಾಹರಣೆಗೆ, ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳು, ಟ್ಯಾಬ್ಲೆಟ್‌ಗಳು, ಸ್ಮಾರ್ಟ್ ಸ್ಪೀಕರ್‌ಗಳು ಮತ್ತು ಸ್ಮಾರ್ಟ್‌ಫೋನ್‌ಗಳನ್ನು ಸಾಧನಗಳೆಂದು ಪರಿಗಣಿಸಲಾಗುತ್ತದೆ.

### ಸೂಕ್ಷ್ಮವಾದ ವೈಯಕ್ತಿಕ ಮಾಹಿತಿ

ಇದು ಗೌಪ್ಯತಾ ವೈದ್ಯಕೀಯ ಅಂಶಗಳು, ಜನಾಂಗ ಅಥವಾ ಜನಾಂಗೀಯ ಮೂಲಗಳು, ರಾಜಕೀಯ ಅಥವಾ ಧಾರ್ಮಿಕತೆಯ ನಂಬಿಕೆಗಳು ಅಥವಾ ಲೈಂಗಿಕತೆಗೆ ಸಂಬಂಧಿಸಿದ ವೈಯಕ್ತಿಕ ಮಾಹಿತಿಯ ನಿರ್ದಿಷ್ಟ ವರ್ಗವಾಗಿದೆ.

### Google ಖಾತೆ

Google ಖಾತೆಗೆ ಸೈನ್ ಅಪ್ ಮಾಡುವ ಮೂಲಕ ಮತ್ತು ಕೆಲವು ವೈಯಕ್ತಿಕ ಮಾಹಿತಿಯನ್ನು (ಸಾಮಾನ್ಯವಾಗಿ ನಿಮ್ಮ ಹೆಸರು, ಇಮೇಲ್ ವಿಳಾಸ ಮತ್ತು ಪಾಸ್‌ವರ್ಡ್) ನಮಗೆ ಒದಗಿಸುವ ಮೂಲಕ ನಮ್ಮ ಕೆಲವು ಸೇವೆಗಳಿಗೆ ನೀವು ಪ್ರವೇಶ ಪಡೆಯಬಹುದು. ನೀವು Google ಸೇವೆಗಳಿಗೆ ಪ್ರವೇಶಿಸುವಾಗ ನಿಮ್ಮ ಗುರುತನ್ನು ಪ್ರಮಾಣೀಕರಿಸುವುದಕ್ಕಾಗಿ ಮತ್ತು ನಿಮ್ಮ ಖಾತೆಗೆ ಇತರರು ಅನಧಿಕೃತವಾಗಿ ಪ್ರವೇಶಿಸುವುದನ್ನು ತಡೆಯುವುದಕ್ಕಾಗಿ ಈ ಖಾತೆ ಮಾಹಿತಿಯನ್ನು ಬಳಸಲಾಗುತ್ತದೆ. ನಿಮ್ಮ Google ಖಾತೆ ಸೆಟ್ಟಿಂಗ್‌ಗಳ ಮೂಲಕ ನಿಮ್ಮ ಖಾತೆಯನ್ನು ನೀವು ಯಾವಾಗ ಬೇಕಾದರೂ ಎಡಿಟ್ ಮಾಡಬಹುದು ಅಥವಾ ಅಳಿಸಬಹುದು.

### IP ವಿಳಾಸ

ಇಂಟರ್ನೆಟ್‌ಗೆ ಸಂಪರ್ಕಪಡಿಸಲಾದ ಪ್ರತಿ ಸಾಧನಕ್ಕೂ ಒಂದು ಸಂಖ್ಯೆಯನ್ನು ನಿಗದಿಪಡಿಸಲಾಗುತ್ತದೆ. ಅದನ್ನು ಇಂಟರ್ನೆಟ್ ಪ್ರೊಟೋಕಾಲ್ (IP) ವಿಳಾಸ ಎಂದು ಕರೆಯುತ್ತಾರೆ. ಈ ಸಂಖ್ಯೆಗಳನ್ನು ಸಾಮಾನ್ಯವಾಗಿ ಭೌಗೋಳಿಕ ವಿಭಾಗಗಳಂತೆ ನಿಗದಿಪಡಿಸಲಾಗಿರುತ್ತದೆ. ಇಂಟರ್ನೆಟ್‌ಗೆ ಸಂಪರ್ಕಗೊಳ್ಳುವ ಸಾಧನದ ಸ್ಥಳವನ್ನು ಗುರುತಿಸಲು ಸಾಮಾನ್ಯವಾಗಿ IP ವಿಳಾಸವನ್ನು ಬಳಸಲಾಗುತ್ತದೆ.

## ಹೆಚ್ಚುವರಿ ಸಂದರ್ಭ

### ಅವರ ಪರವಾಗಿ ಜಾಹೀರಾತು ಮತ್ತು ಸಂಶೋಧನಾ ಸೇವೆಗಳು

ಉದಾಹರಣೆಗೆ, ತಮ್ಮ ಜಾಹೀರಾತು ಅಭಿಯಾನಗಳ ಕಾರ್ಯಕ್ಷಮತೆಯನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಲು ಜಾಹೀರಾತುದಾರರು, ಅವರ ಲಾಯಲ್ಟಿ-ಕಾರ್ಡ್ ಪ್ರೋಗ್ರಾಂಗಳಿಂದ ಡೇಟಾವನ್ನು ಅಪ್‌ಲೋಡ್ ಮಾಡಬಹುದು. ಜನರ ವ್ಯಕ್ತಿಗತ ಮಾಹಿತಿಯನ್ನು ಬಹಿರಂಗಪಡಿಸದ ಕ್ರೋಢೀಕೃತ ವರದಿಗಳನ್ನು ಮಾತ್ರ ನಾವು ಜಾಹೀರಾತುದಾರರಿಗೆ ಒದಗಿಸುತ್ತೇವೆ.

## ಆನ್‌ಲೈನ್‌ನಲ್ಲಿ ನೀವು ಹೆಚ್ಚು ಪ್ರಾಮುಖ್ಯತೆ ನೀಡುವ ಜನರು

ಉದಾಹರಣೆಗೆ, ನೀವು ರಚಿಸುವ ಇಮೇಲ್‌ನ To, Cc, ಅಥವಾ Bcc ಕ್ಷೇತ್ರದಲ್ಲಿ ನೀವು ವಿಳಾಸವನ್ನು ಟೈಪ್ ಮಾಡುವಾಗ, ನೀವು ಹೆಚ್ಚಾಗಿ ಸಂಪರ್ಕಿಸುವ ಜನರನ್ನು ಆದರಿಸಿ, Gmail ನಿಮಗೆ ವಿಳಾಸಗಳನ್ನು ಸೂಚಿಸಬಹುದು.

## ಇತರ ಸೈಟ್‌ಗಳು ಮತ್ತು ಅಪ್ಲಿಕೇಶನ್‌ಗಳಲ್ಲಿ ನಿಮ್ಮ ಚಟುವಟಿಕೆ

ಈ ಚಟುವಟಿಕೆಯು Google ಸೇವೆಗಳನ್ನು ನೀವು ಬಳಸಿಕೊಳ್ಳುವ ಮೂಲಕ ಬಂದಿರಬಹುದು. ಉದಾಹರಣೆಗೆ, ನಿಮ್ಮ ಖಾತೆಯನ್ನು Chrome ಗೆ ಸಿಂಕ್ ಮಾಡಿದಲ್ಲಿಂದ ಅಥವಾ Google ನ ಪಾಲುದಾರರಾಗಿರುವ ಸೈಟ್‌ಗಳು ಮತ್ತು ಅಪ್ಲಿಕೇಶನ್‌ಗಳಿಗೆ ನೀವು ನೀಡಿದ ಭೇಟಿಗಳಿಂದ. ಹೆಚ್ಚಿನ ವೆಬ್‌ಸೈಟ್‌ಗಳು ಮತ್ತು ಅಪ್ಲಿಕೇಶನ್‌ಗಳು ತಮ್ಮ ವಿಷಯ ಮತ್ತು ಸೇವೆಗಳನ್ನು ಸುಧಾರಿಸಲು Google ಜೊತೆಗೆ ಪಾಲುದಾರಿಕೆ ಹೊಂದಿವೆ. ಉದಾಹರಣೆಗೆ, ಒಂದು ವೆಬ್‌ಸೈಟ್ ನಮ್ಮ ಜಾಹೀರಾತು ಸೇವೆಗಳು (AdSense ನಂತೆ) ಅಥವಾ ವಿಶ್ಲೇಷಣೆಗಳ ಪರಿಕರಗಳನ್ನು (Google Analytics ನಂತೆ) ಬಳಸಬಹುದು ಅಥವಾ ಇತರ ವಿಷಯಗಳನ್ನು (ಉದಾಹರಣೆಗೆ YouTube ನಿಂದ ವೀಡಿಯೊಗಳು) ಎಂಬೆಡ್ ಮಾಡಬಹುದು. ಈ ಸೇವೆಗಳು ನಿಮ್ಮ ಚಟುವಟಿಕೆಯ ಕುರಿತಾದ ಮಾಹಿತಿಯನ್ನು Google ಜೊತೆ ಹಂಚಿಕೊಳ್ಳಬಹುದು ಮತ್ತು ನಿಮ್ಮ ಖಾತೆಯ ಸೆಟ್ಟಿಂಗ್‌ಗಳನ್ನು ಹಾಗೂ ಬಳಸುತ್ತಿರುವ ಉತ್ಪನ್ನಗಳನ್ನು ಆಧರಿಸಿ (ಉದಾಹರಣೆಗೆ, ಒಬ್ಬ ಪಾಲುದಾರ ನಮ್ಮ ಜಾಹೀರಾತು ಸೇವೆಗಳೊಂದಿಗೆ Google Analytics ಅನ್ನು ಬಳಸುವಾಗ) ಈ ಡೇಟಾವನ್ನು ನಿಮ್ಮ ವೈಯಕ್ತಿಕ ಮಾಹಿತಿಯೊಂದಿಗೆ ಸಂಯೋಜಿಸಬಹುದು.

ನೀವು ನಮ್ಮ ಪಾಲುದಾರ ಸೈಟ್‌ಗಳು ಮತ್ತು ಅಪ್ಲಿಕೇಶನ್‌ಗಳನ್ನು ಬಳಸಿದಾಗ Google ಹೇಗೆ ಡೇಟಾವನ್ನು ಬಳಸುತ್ತದೆ ಎನ್ನುವುದರ ಕುರಿತು ಇನ್ನಷ್ಟು ತಿಳಿಯಿರಿ.

## ಕರೆಗಳನ್ನು ಮಾಡಲು ಅಥವಾ ಸ್ವೀಕರಿಸಲು ಅಥವಾ ಸಂದೇಶಗಳನ್ನು ಕಳುಹಿಸಲು ಅಥವಾ ಸ್ವೀಕರಿಸಲು ಸೇವೆಗಳು

ಈ ಸೇವೆಗಳ ಉದಾಹರಣೆಗಳು ಹೀಗಿವೆ:

- ದೇಶೀಯ ಮತ್ತು ಅಂತಾರಾಷ್ಟ್ರೀಯ ಕರೆಗಳನ್ನು ಮಾಡುವುದಕ್ಕಾಗಿ Google Hangouts
- ಕರೆಗಳನ್ನು ಮಾಡಲು, ಪಠ್ಯ ಸಂದೇಶಗಳನ್ನು ಕಳುಹಿಸಲು ಮತ್ತು ಧ್ವನಿಮೇಲ್ ಅನ್ನು ನಿರ್ವಹಿಸಲು Google Voice
- ಫೋನ್ ಯೋಜನೆಗಾಗಿ, Google Fi

## ಕಸ್ಟಮೈಸ್ ಮಾಡಿರುವ ಹುಡುಕಾಟ ಫಲಿತಾಂಶಗಳು

ಉದಾಹರಣೆಗೆ, ನೀವು Google ಖಾತೆಗೆ ಸೈನ್ ಇನ್ ಮಾಡಿದಾಗ ಮತ್ತು ವೆಬ್ ಮತ್ತು ಅಪ್ಲಿಕೇಶನ್ ಚಟುವಟಿಕೆಯನ್ನು ಸಕ್ರಿಯಗೊಳಿಸಿರುವಾಗ, ನಿಮ್ಮ ಹಿಂದಿನ ಹುಡುಕಾಟಗಳು ಹಾಗೂ ಇತರ Google ಸೇವೆಗಳಲ್ಲಿನ ಚಟುವಟಿಕೆಯನ್ನು ಆಧರಿಸಿ, ನಿಮಗೆ ಹೆಚ್ಚು ಸೂಕ್ತವಾದ ಹುಡುಕಾಟ ಫಲಿತಾಂಶಗಳನ್ನು ನೀವು ಪಡೆಯಬಹುದು. ನೀವು ಇಲ್ಲಿ ಹೆಚ್ಚು ತಿಳಿದುಕೊಳ್ಳಬಹುದು. ನೀವು ಸೈನ್ ಔಟ್ ಆಗಿರುವಾಗಲೂ ಸಹ ನೀವು ಕಸ್ಟಮೈಸ್ ಮಾಡಿರುವ ಹುಡುಕಾಟ ಫಲಿತಾಂಶಗಳನ್ನು ಪಡೆಯಬಹುದು. ಹುಡುಕಾಟದಲ್ಲಿ ನಿಮಗೆ ಈ ಮಟ್ಟದ ಕಸ್ಟಮೈಸ್ ಮಾಡುವಿಕೆ ಬೇಡದಿದ್ದರೆ, ನೀವು ಖಾಸಗಿಯಾಗಿ ಹುಡುಕಾಟ ನಡೆಸಬಹುದು ಮತ್ತು ಬ್ರೌಸ್ ಮಾಡಬಹುದು ಅಥವಾ ಸೈನ್-ಔಟ್ ಆಗಿರುವಾಗ ಹುಡುಕಾಟ ವೈಯಕ್ತೀಕರಿಸುವುದನ್ನು ಆಫ್ ಮಾಡಬಹುದು.

## ಕಾನೂನು ಪ್ರಕ್ರಿಯೆ ಅಥವಾ ಜಾರಿಗೊಳಿಸಬಹುದಾದ ಸರಕಾರಿ ಕೋರಿಕೆ

ಇತರ ತಂತ್ರಜ್ಞಾನ ಮತ್ತು ಸಂವಹನ ಕಂಪೆನಿಗಳಂತೆ, ಬಳಕೆದಾರ ಡೇಟಾವನ್ನು ಬಹಿರಂಗಪಡಿಸಲು ವಿಶ್ವಾದ್ಯಂತದ ಸರಕಾರಗಳು ಹಾಗೂ ನ್ಯಾಯಾಲಯಗಳಿಂದ Google ನಿಯಮಿತವಾಗಿ ಕೋರಿಕೆಗಳನ್ನು ಪಡೆಯುತ್ತದೆ. ಈ ಕಾನೂನು ಕೋರಿಕೆಗಳನ್ನು ನಾವು ಯಾವ ರೀತಿ ಅನುಸರಿಸುತ್ತೇವೆ ಎಂಬುದಕ್ಕೆ, ನೀವು Google ನಲ್ಲಿ ಸಂಗ್ರಹಣೆ ಮಾಡುವ ಡೇಟಾದ ಗೌಪ್ಯತೆ ಮತ್ತು ಸುರಕ್ಷತೆಯ ಕುರಿತಾದ ಗೌರವವೇ ಅಡಿಪಾಯವಾಗಿರುತ್ತದೆ. ನಮ್ಮ ಕಾನೂನು ತಂಡವು, ಕೋರಿಕೆಯ ವಿಧವನ್ನು ಲೆಕ್ಕಿಸದೆ, ಪ್ರತಿಯೊಂದು ಕೋರಿಕೆಯನ್ನು ಪರಿಶೀಲಿಸುತ್ತದೆ. ಕೋರಿಕೆಯು ತೀರಾ ವಿಸ್ತಾರವಾಗಿದೆ ಮತ್ತು ಸರಿಯಾದ ಪ್ರಕ್ರಿಯೆಯನ್ನು ಅನುಸರಿಸುವುದಿಲ್ಲ ಎಂದು ಕಂಡುಬಂದಲ್ಲಿ ನಾವು ಅದನ್ನು ಆಗಾಗ ಹಿಂದೆ ತಳ್ಳುತ್ತಿರುತ್ತೇವೆ. ನಮ್ಮ ಪಾರದರ್ಶಕತೆ ವರದಿಯಲ್ಲಿ ಇನ್ನಷ್ಟು ತಿಳಿಯಿರಿ.

## ಖಚಿತಪಡಿಸುವುದು ಮತ್ತು ಸುಧಾರಿಸುವುದು

ಉದಾಹರಣೆಗೆ, ನಮ್ಮ ಜಾಹೀರಾತುಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು, ಜನರು ಜಾಹೀರಾತುಗಳೊಂದಿಗೆ ಹೇಗೆ ಸಂವಹಿಸುತ್ತಾರೆ ಎಂಬುದನ್ನು ನಾವು ವಿಶ್ಲೇಷಿಸುತ್ತೇವೆ.

## ಟ್ರೆಂಡ್‌ಗಳನ್ನು ತೋರಿಸಿ

ಬಹಳಷ್ಟು ಜನ ಏನನ್ನಾದರೂ ಹುಡುಕಲು ಪ್ರಾರಂಭಿಸಿದಾಗ, ಆಯಾ ಕಾಲಮಾನದ ನಿರ್ದಿಷ್ಟ ಟ್ರೆಂಡ್‌ಗಳ ಕುರಿತು ಅದು ಬಹಳ ಉಪಯುಕ್ತ ಮಾಹಿತಿಯನ್ನು ಒದಗಿಸಬಹುದು. ಹುಡುಕಾಟಗಳ ಜನಪ್ರಿಯತೆಯನ್ನು ಅಂದಾಜಿಸಲು, Google Trends, ನಿರ್ದಿಷ್ಟ ಕಾಲಾವಧಿಯ Google ವೆಬ್ ಹುಡುಕಾಟಗಳನ್ನು ಸ್ಯಾಂಪಲ್ ಮಾಡುತ್ತದೆ ಮತ್ತು ಆ ಫಲಿತಾಂಶಗಳನ್ನು ಸಾರ್ವಜನಿಕವಾಗಿ,ಕ್ರೋಢೀಕೃತ ಪದಗಳಲ್ಲಿ ಹಂಚಿಕೊಳ್ಳುತ್ತದೆ. ಇನ್ನಷ್ಟು ತಿಳಿಯಿರಿ

## ಥರ್ಡ್ ಪಾರ್ಟಿಗಳು

ಉದಾಹರಣೆಗೆ, ಹಕ್ಕುದಾರರಿಗೆ ಬಳಕೆಯ ಅಂಕಿಅಂಶಗಳನ್ನು ವರದಿ ಮಾಡಲು, ಅವರ ವಿಷಯವನ್ನು ನಮ್ಮ ಸೇವೆಗಳಲ್ಲಿ ಹೇಗೆ ಬಳಸಲಾಗಿದೆ ಎಂಬುದನ್ನು ವರದಿ ಮಾಡಲು ನಿಮ್ಮ ಮಾಹಿತಿಯನ್ನು ನಾವು ಪ್ರಕ್ರಿಯೆಗೊಳಪಡಿಸುತ್ತೇವೆ. ಜನರು ನಿಮ್ಮ ಹೆಸರನ್ನು ಹುಡುಕಿದರೆ ಕೂಡಾ, ನಾವು ನಿಮ್ಮ ಮಾಹಿತಿಯನ್ನು ಪ್ರಕ್ರಿಯೆಗೊಳಿಸುತ್ತೇವೆ ಮತ್ತು ನಿಮ್ಮ ಕುರಿತು ಸಾರ್ವಜನಿಕವಾಗಿ ಲಭ್ಯವಿರುವ ಮಾಹಿತಿಯನ್ನು ಹೊಂದಿರುವ ಸೈಟ್‌ಗಳ ಹುಡುಕಾಟ ಫಲಿತಾಂಶಗಳನ್ನು ಪ್ರದರ್ಶಿಸುತ್ತೇವೆ.

## ದುರ್ಬಳಕೆಯ ವಿರುದ್ಧ ಸಂರಕ್ಷಣೆ

ಉದಾಹರಣೆಗೆ, ನಿಮ್ಮ ಖಾತೆಯ ಸುರಕ್ಷತೆಗೆ ಧಕ್ಕೆಯುಂಟಾಗಿದೆ ಎಂದು ನಾವು ಭಾವಿಸಿದರೆ (ಆ ಸಮಯದಲ್ಲಿ ನಿಮ್ಮ ಖಾತೆಯನ್ನು ಸಂರಕ್ಷಿಸುವುದಕ್ಕಾಗಿ ಕ್ರಮ ಕೈಗೊಳ್ಳಲು ನಾವು ಸಹಾಯ ಮಾಡಬಹುದು), ಆ ಕುರಿತು ನಿಮಗೆ ಸೂಚನೆ ನೀಡುವುದಕ್ಕಾಗಿ ಸುರಕ್ಷತೆಗೆ ಬೆದರಿಕೆಗಳ ಕುರಿತಾದ ಮಾಹಿತಿಯು ನಮಗೆ ಸಹಾಯ ಮಾಡಬಹುದು.

## ದುರ್ಬಳಕೆಯನ್ನು ಪತ್ತೆಹಚ್ಚುವುದು

ನಮ್ಮ ಸಿಸ್ಟಂಗಳಲ್ಲಿ, ನಮ್ಮ ಕಾರ್ಯನೀತಿಗಳನ್ನು ಉಲ್ಲಂಘಿಸುವಂತಹ ಸ್ಪ್ಯಾಮ್, ಮಾಲ್‌ವೇರ್, ಕಾನೂನುಬಾಹಿರ ವಿಷಯ ಅಥವಾ ಇತರ ರೀತಿಯ ದುರ್ಬಳಕೆಗಳನ್ನು ನಾವು ಪತ್ತೆಹಚ್ಚಿದರೆ, ನಿಮ್ಮ ಖಾತೆಯನ್ನು ನಾವು ನಿಷ್ಕ್ರಿಯಗೊಳಿಸಬಹುದು ಅಥವಾ ಸೂಕ್ತ ಕ್ರಮ ಕೈಗೊಳ್ಳಬಹುದು. ಕೆಲವೊಂದು ಸಂದರ್ಭಗಳಲ್ಲಿ, ಉಲ್ಲಂಘನೆಯ ಕುರಿತು ನಾವು ಸೂಕ್ತ ಅಧಿಕಾರಿಗಳಿಗೆ ವರದಿಯನ್ನು ಸಹ ಮಾಡಬಹುದು.

## ನಮ್ಮ ಸೇವೆಗಳನ್ನು ಕಸ್ಟಮೈಸ್ ಮಾಡುವುದು

ಉದಾಹರಣೆಗೆ, ನಿಮ್ಮ ದೇಶಕ್ಕೆ ನಿರ್ದಿಷ್ಟವಾದ ಈವೆಂಟ್ ಅನ್ನು ಆಚರಿಸಲು, ಹುಡುಕಾಟದ ಮುಖಪುಟದಲ್ಲಿ ನಾವು Google ಡೂಡಲ್ ಅನ್ನು ಪ್ರದರ್ಶಿಸಬಹುದು.

## ನಮ್ಮ ಸೇವೆಗಳನ್ನು ವಿತರಿಸುವುದು

ನಮ್ಮ ಸೇವೆಗಳನ್ನು ವಿತರಿಸಲು ನಾವು ನಿಮ್ಮ ಮಾಹಿತಿಯನ್ನು ಹೇಗೆ ಬಳಸುತ್ತೇವೆ ಎಂಬುದಕ್ಕೆ ಉದಾಹರಣೆಗಳು ಇಲ್ಲಿವೆ:

- ನೀವು ವಿನಂತಿಸಿದ ಡೇಟಾವನ್ನು ನಿಮಗೆ ಕಳುಹಿಸಲು, ಉದಾಹರಣೆಗೆ YouTube ವೀಡಿಯೊವನ್ನು ಲೋಡ್ ಮಾಡಲು, ನಿಮ್ಮ ಸಾಧನಕ್ಕೆ ನಿಯೋಜಿಸಿರುವ IP ವಿಳಾಸವನ್ನು ನಾವು ಬಳಸುತ್ತೇವೆ

- ನಿಮ್ಮ Google ಖಾತೆಗೆ ಪ್ರವೇಶ ಹೊಂದಬೇಕಾದ ವ್ಯಕ್ತಿಯಾಗಿ ನಿಮ್ಮನ್ನು ಪ್ರಮಾಣೀಕರಿಸುವಲ್ಲಿ ನಮಗೆ ನೆರವಾಗಲು, ನಿಮ್ಮ ಸಾಧನದಲ್ಲಿನ ಕುಕೀಗಳಲ್ಲಿ ಸಂಗ್ರಹಣೆ ಮಾಡಿರುವ ಅನನ್ಯ ಗುರುತುಗಳನ್ನು ನಾವು ಬಳಸುತ್ತೇವೆ

- ನೀವು Google Photos ಗೆ ಅಪ್‌ಲೋಡ್ ಮಾಡುವ ಫೋಟೋಗಳು ಮತ್ತು ವೀಡಿಯೊಗಳನ್ನು, ನೀವು ಹಂಚಿಕೊಳ್ಳಬಹುದಾದ ಆಲ್ಬಮ್‌ಗಳು, ಆ್ಯನಿಮೇಶನ್‌ಗಳು ಮತ್ತು ಇತರ ರಚನೆಗಳನ್ನು ರಚಿಸುವಲ್ಲಿ ನಿಮಗೆ ನೆರವಾಗಲು ಬಳಸಲಾಗುತ್ತದೆ. ಇನ್ನಷ್ಟು ತಿಳಿಯಿರಿ

- ನೀವು ಸ್ವೀಕರಿಸಬಹುದಾದ ಫ್ಲೈಟ್ ಖಚಿತಪಡಿಸುವಿಕೆ ಇಮೇಲ್ ಅನ್ನು, ನಿಮ್ಮ Gmail ನಲ್ಲಿ ಕಾಣಿಸುವ “ಚೆಕ್-ಇನ್” ಬಟನ್ ಅನ್ನು ರಚಿಸಲು ಬಳಸಬಹುದಾಗಿದೆ

- ನೀವು ನಮ್ಮಿಂದ ಸೇವೆಗಳು ಅಥವಾ ಭೌತಿಕ ಸರಕುಗಳನ್ನು ಖರೀದಿಸಿದಾಗ, ನಿಮ್ಮ ಶಿಪ್ಪಿಂಗ್ ವಿಳಾಸ ಅಥವಾ ವಿತರಣೆ ಸೂಚನೆಗಳಂತಹ ಮಾಹಿತಿಯನ್ನು ನೀವು ನಮಗೆ ಒದಗಿಸಬಹುದು. ನಿಮ್ಮ ಆರ್ಡರ್ ಪ್ರಕ್ರಿಯೆಗೊಳಿಸುವುದು, ಪೂರೈಸುವುದು

ಮತ್ತು ವಿತರಣೆ ಮಾಡುವ ರೀತಿಯ ವಿಚಾರಗಳಲ್ಲಿ, ಹಾಗೆಯೇ ನೀವು ಖರೀದಿಸುವ ಉತ್ಪನ್ನ ಅಥವಾ ಸೇವೆಗೆ ಸಂಬಂಧಿಸಿದಂತೆ ಬೆಂಬಲವನ್ನು ಒದಗಿಸಲು ನಾವು ಈ ಮಾಹಿತಿಯನ್ನು ಬಳಸುತ್ತೇವೆ.

## ನಮ್ಮ ಸೇವೆಗಳು ಉದ್ದೇಶಿಸಿದಂತೆಯೇ ಕಾರ್ಯನಿರ್ವಹಿಸುತ್ತಿವೆ ಎನ್ನುವುದನ್ನು ಖಚಿತಪಡಿಸಲು

ಉದಾಹರಣೆಗೆ, ಸಮಸ್ಯೆಗಳನ್ನು ಕಂಡುಹಿಡಿಯುವುದಕ್ಕಾಗಿ ನಮ್ಮ ಸಿಸ್ಟಂಗಳನ್ನು ನಾವು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿರುತ್ತೇವೆ. ಒಂದು ನಿರ್ದಿಷ್ಟ ವೈಶಿಷ್ಟ್ಯದಲ್ಲಿ ನಮಗೇನಾದರೂ ತೊಂದರೆ ಕಂಡುಬಂದಲ್ಲಿ, ಸಮಸ್ಯೆ ಪ್ರಾರಂಭವಾಗುವುದಕ್ಕೆ ಮೊದಲು ಸಂಗ್ರಹಿಸಿದ ಮಾಹಿತಿಯನ್ನು ಪರಿಶೀಲಿಸುವ ಮೂಲಕ ನಾವು ಸಮಸ್ಯೆಯನ್ನು ಬಲು ಬೇಗನೆ ಸರಿಪಡಿಸಲು ಸಾಧ್ಯವಾಗುತ್ತದೆ.

## ನಾವು ಸಂಗ್ರಹಿಸುವ ಮಾಹಿತಿಯನ್ನು ಸಂಯೋಜಿಸುವುದು

ನಾವು ಸಂಗ್ರಹಿಸುವ ಮಾಹಿತಿಯನ್ನು ನಾವು ಹೇಗೆ ಸಂಯೋಜಿಸುತ್ತೇವೆ ಎಂಬುದಕ್ಕೆ ಕೆಲವು ಉದಾಹರಣೆಗಳು ಇಲ್ಲಿವೆ:

- ನಿಮ್ಮ Google ಖಾತೆಗೆ ನೀವು ಸೈನ್ ಇನ್ ಮಾಡಿರುವಾಗ ಮತ್ತು Google ನಲ್ಲಿ ಹುಡುಕಾಟ ನಡೆಸುವಾಗ, ನೀವು ಸಾರ್ವಜನಿಕ ವೆಬ್‌ನಿಂದ ಹುಡುಕಾಟ ಫಲಿತಾಂಶಗಳನ್ನು ನೋಡುವಿರಿ, ಜೊತೆಗೆ Gmail ಅಥವಾ Google ಕ್ಯಾಲೆಂಡರ್‌ನಂತಹ ಇತರ Google ಉತ್ಪನ್ನಗಳಲ್ಲಿ ನೀವು ಹೊಂದಿರುವ ಸೂಕ್ತ ಮಾಹಿತಿಯನ್ನು ಸಹ ಕಾಣುವಿರಿ. ನಿಮ್ಮ ಮುಂಬರುವ ಫ್ಲೈಟ್‌ಗಳ ಸ್ಥಿತಿ, ರೆಸ್ಟೋರೆಂಟ್ ಮತ್ತು ಹೋಟೆಲ್ ಕಾಯ್ದಿರಿಸುವಿಕೆಗಳು ಅಥವಾ ನಿಮ್ಮ ಫೋಟೋಗಳಂತಹ ವಿಷಯಗಳು ಇದರಲ್ಲಿ ಒಳಗೊಂಡಿರಬಹುದು. ಇನ್ನಷ್ಟು ತಿಳಿಯಿರಿ
- ನೀವು ಯಾರೊಂದಿಗಾದರೂ Gmail ಮೂಲಕ ಸಂವಹನ ನಡೆಸಿದ್ದರೆ ಹಾಗೂ ಅವರನ್ನು Google ಡಾಕ್ ಅಥವಾ Google ಕ್ಯಾಲೆಂಡರ್‌ನಲ್ಲಿನ ಈವೆಂಟ್‌ನಲ್ಲಿ ಸೇರಿಸಬೇಕೆಂದಿದ್ದರೆ, ನೀವು ಅವರ ಹೆಸರನ್ನು ಟೈಪ್ ಮಾಡಲು ಪ್ರಾರಂಭಿಸಿದ ತಕ್ಷಣ Google ಅವರ ಇಮೇಲ್ ವಿಳಾಸನ್ನು ಸ್ವಯಂಪೂರ್ಣಗೊಳಿಸುವ ಮೂಲಕ ನಿಮ್ಮ ಕೆಲಸವನ್ನು ಹಗುರಗೊಳಿಸುತ್ತದೆ. ನಿಮಗೆ ತಿಳಿದಿರುವ ಜನರೊಂದಿಗೆ ವಿಷಯಗಳನ್ನು ಹಂಚಿಕೊಳ್ಳುವುದನ್ನು ಈ ವೈಶಿಷ್ಟ್ಯವು ಸುಲಭಗೊಳಿಸುತ್ತದೆ. ಇನ್ನಷ್ಟು ತಿಳಿಯಿರಿ
- ನಿಮ್ಮ ಸೆಟ್ಟಿಂಗ್‌ಗಳನ್ನು ಆಧರಿಸಿ, ನೀವು ಇತರ Google ಉತ್ಪನ್ನಗಳಲ್ಲಿ ಸಂಗ್ರಹಣೆ ಮಾಡಿರುವ ವಿಷಯವನ್ನು ಬಳಸಿಕೊಂಡು, Google ಅಪ್ಲಿಕೇಶನ್ ನಿಮಗೆ ವೈಯಕ್ತೀಕರಿಸಿದ ವಿಷಯವನ್ನು ತೋರಿಸಬಹುದು. ಉದಾಹರಣೆಗೆ, ನಿಮ್ಮ ವೆಬ್ ಮತ್ತು ಅಪ್ಲಿಕೇಶನ್ ಚಟುವಟಿಕೆಯಲ್ಲಿ ನೀವು ಹುಡುಕಾಟಗಳನ್ನು ಸಂಗ್ರಹಣೆ ಮಾಡಿದ್ದರೆ, ನಿಮ್ಮ ಚಟುವಟಿಕೆಯನ್ನು ಆಧರಿಸಿ Google ಅಪ್ಲಿಕೇಶನ್ ನಿಮಗೆ ಸುದ್ದಿ ಲೇಖನಗಳನ್ನು ತೋರಿಸಬಹುದು ಅಥವಾ ನಿಮ್ಮ ಅಸಕ್ತಿಗಳನ್ನು ಆಧರಿಸಿ, ಕ್ರೀಡಾ ಸ್ಕೋರ್‌ಗಳಂತಹ ಇತರ ಮಾಹಿತಿಯನ್ನು ತೋರಿಸಬಹುದು. ಇನ್ನಷ್ಟು ತಿಳಿಯಿರಿ
- ನಿಮ್ಮ Google ಖಾತೆಯನ್ನು ನೀವು Google Home ಖಾತೆಗೆ ಲಿಂಕ್ ಮಾಡಿದರೆ, ನೀವು Google ಸಹಾಯಕದ ಮೂಲಕ ನಿಮ್ಮ ಮಾಹಿತಿಯನ್ನು ನಿರ್ವಹಿಸಬಹುದು ಮತ್ತು ಕೆಲಸಗಳನ್ನು ಪೂರೈಸಬಹುದು. ಉದಾಹರಣೆಗೆ, ನಿಮ್ಮ Google ಕ್ಯಾಲೆಂಡರ್‌ಗೆ ನೀವು ಈವೆಂಟ್‌ಗಳನ್ನು ಸೇರಿಸಬಹುದು ಅಥವಾ ಆ ದಿನಕ್ಕಾಗಿ ನಿಮ್ಮ ವೇಳಾಪಟ್ಟಿಯನ್ನು ಪಡೆದುಕೊಳ್ಳಬಹುದು, ನಿಮ್ಮ ಮುಂಬರುವ ಫ್ಲೈಟ್‌ಗಳ ಸ್ಥಿತಿಯ ಕುರಿತು ಅಪ್‌ಡೇಟ್‌ಗಳನ್ನು ಕೇಳಬಹುದು ಅಥವಾ ನಿಮ್ಮ ಫೋನ್‌ಗೆ ಡ್ರೈವಿಂಗ್ ನಿರ್ದೇಶನಗಳಂತಹ ಮಾಹಿತಿಯನ್ನು ಕಳುಹಿಸಬಹುದು. ಇನ್ನಷ್ಟು ತಿಳಿಯಿರಿ

## ನಿಮಗೆ ಅತ್ಯಂತ ಉಪಯುಕ್ತವಾಗಬಹುದಾದ ಜಾಹೀರಾತುಗಳು

ಉದಾಹರಣೆಗೆ, ನೀವು YouTube ನಲ್ಲಿ ಬೇಕಿಂಗ್ ಕುರಿತಾದ ವೀಡಿಯೊಗಳನ್ನು ವೀಕ್ಷಿಸಿದರೆ, ನೀವು ವೆಬ್ ಅನ್ನು ಬ್ರೌಸ್ ಮಾಡುವಾಗ ಬೇಕಿಂಗ್‌ಗೆ ಸಂಬಂಧಿಸಿದ ಇನ್ನಷ್ಟು ಜಾಹೀರಾತುಗಳು ನಿಮಗೆ ಕಾಣಿಸುತ್ತವೆ. ನಿಮ್ಮ ಅಂದಾಜು ಸ್ಥಳವನ್ನು ನಿರ್ಧರಿಸಲು ನಾವು ನಿಮ್ಮ IP ವಿಳಾಸವನ್ನು ಕೂಡಾ ಬಳಸಬಹುದು. ಈ ಮೂಲಕ, ನೀವು "ಪಿಜ್ಜಾ" ಎಂದು ಹುಡುಕಿದರೆ, ನಿಮ್ಮ ಸಮೀಪದ ಪಿಜ್ಜಾ ಡೆಲಿವರಿ ಸೇವೆಯ ಜಾಹೀರಾತುಗಳನ್ನು ತೋರಿಸಲು ನಮಗೆ ಸಾಧ್ಯವಾಗುತ್ತದೆ. Google ಜಾಹೀರಾತುಗಳ ಕುರಿತು ಮತ್ತು ನಿಮಗೆ ನಿರ್ದಿಷ್ಟ ಜಾಹೀರಾತುಗಳು ಏಕೆ ಕಾಣಿಸಬಹುದು ಎಂಬ ಕುರಿತು ಇನ್ನಷ್ಟು ತಿಳಿಯಿರಿ.

## ನಿಮ್ಮ ಸಾಧನದ ಸಮೀಪದಲ್ಲಿರುವ ವಸ್ತುಗಳ ಕುರಿತು ಮಾಹಿತಿ

ನೀವು Android ನಲ್ಲಿ Google ನ ಸ್ಥಳ ಸೇವೆಯನ್ನು ಬಳಸುತ್ತಿದ್ದರೆ, ನಿಮ್ಮ ಸ್ಥಳವನ್ನು ಅವಲಂಬಿಸುವ Google ನಕ್ಷೆಗಳಂತಹ ಅಪ್ಲಿಕೇಶನ್‌ಗಳ ಕಾರ್ಯಕ್ಷಮತೆಯನ್ನು ನಾವು ಸುಧಾರಿಸಬಹುದು. ನೀವು Google ನ ಸ್ಥಳ ಸೇವೆಗಳನ್ನು ಬಳಸಿದರೆ, ನಿಮ್ಮ ಸಾಧನವು ತನ್ನ ಸ್ಥಳ, ಸೆನ್ಸರ್‌ಗಳು (ವೇಗೋತ್ಕರ್ಷಕ ಮಾಪಕಗಳಂಥವು) ಮತ್ತು ಸಮೀಪದ ಸೆಲ್ ಟವರ್‌ಗಳು ಹಾಗೂ ಪ್ರವೇಶ ಬಿಂದುಗಳ (MAC ವಿಳಾಸಗಳು ಮತ್ತು ಸಿಗ್ನಲ್ ಸಾಮರ್ಥ್ಯದಂಥವು) ಕುರಿತಾದ ಮಾಹಿತಿಯನ್ನು Google ಗೆ ಕಳುಹಿಸುತ್ತದೆ. ಈ ಎಲ್ಲಾ ವಿಷಯಗಳು ನಿಮ್ಮ ಸ್ಥಳವನ್ನು ನಿರ್ಧರಿಸಲು ಸಹಾಯ ಮಾಡುತ್ತವೆ. Google ಸ್ಥಳ ಸೇವೆಗಳನ್ನು ಸಕ್ರಿಯಗೊಳಿಸಲು ನಿಮ್ಮ ಸಾಧನ ಸೆಟ್ಟಿಂಗ್‌ಗಳನ್ನು ನೀವು ಬಳಸಬಹುದು. ಇನ್ನಷ್ಟು ತಿಳಿಯಿರಿ

## ನಿಮ್ಮ ಸಾಧನದ ಸೆನ್ಸರ್ ಡೇಟಾ

ನಿಮ್ಮ ಸ್ಥಳ ಮತ್ತು ಚಲನೆಯನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳುವುದಕ್ಕಾಗಿ ನಿಮ್ಮ ಸಾಧನವು ಸೆನ್ಸರ್‌ಗಳನ್ನು ಹೊಂದಿರಬಹುದು. ಉದಾಹರಣೆಗೆ, ನಿಮ್ಮ ವೇಗವನ್ನು ನಿರ್ಧರಿಸಲು ವೇಗೋತ್ಕರ್ಷಕ ಮಾಪಕವನ್ನು ಬಳಸಬಹುದು ಮತ್ತು ನಿಮ್ಮ ಪ್ರಯಾಣದ ದಿಕ್ಕನ್ನು ಕಂಡುಹಿಡಿಯಲು ಗೈರೋಸ್ಕೋಪ್ ಅನ್ನು ಬಳಸಬಹುದು.

## ನಿಮ್ಮ Google ಖಾತೆಯ ಜೊತೆ ಸಿಂಕ್ ಮಾಡಲಾಗಿದೆ

ನಿಮ್ಮ Google ಖಾತೆಯೊಂದಿಗೆ Chrome ಅನ್ನು ಸಿಂಕ್ರೊನೈಸ್ ಮಾಡುವುದನ್ನು ನೀವು ಸಕ್ರಿಯಗೊಳಿಸಿದ್ದರೆ ಮಾತ್ರ ನಿಮ್ಮ Chrome ಬ್ರೌಸಿಂಗ್ ಇತಿಹಾಸವನ್ನು ನಿಮ್ಮ ಖಾತೆಯಲ್ಲಿ ಉಳಿಸಲಾಗುತ್ತದೆ. ಇನ್ನಷ್ಟು ತಿಳಿಯಿರಿ

## ನಿರ್ದಿಷ್ಟ ಪಾಲುದಾರರು

ಉದಾಹರಣೆಗೆ, YouTube ರಚನೆಕಾರರು ಅಥವಾ ಜಾಹೀರಾತುದಾರರು ತಮ್ಮ YouTube ವೀಡಿಯೊಗಳು ಅಥವಾ ಜಾಹೀರಾತುಗಳ ಪ್ರೇಕ್ಷಕರ ಕುರಿತು ತಿಳಿದುಕೊಳ್ಳಲು, ಕುಕೀಗಳು ಅಥವಾ ಅಂತಹುದೇ ತಂತ್ರಜ್ಞಾನಗಳನ್ನು ಬಳಸುವ ಮಾಪನ ಕಂಪೆನಿಗಳೊಂದಿಗೆ ಕೆಲಸ ಮಾಡಲು ನಾವು ಅವಕಾಶ ನೀಡುತ್ತೇವೆ. ಮತ್ತೊಂದು ಉದಾಹರಣೆ ಎಂದರೆ ನಮ್ಮ ಶಾಪಿಂಗ್ ಪುಟಗಳಲ್ಲಿನ ವ್ಯಾಪಾರಿಗಳು, ಅವರು ತಮ್ಮ ಉತ್ಪನ್ನ ಪಟ್ಟಿಗಳನ್ನು ಎಷ್ಟು ಬೇರೆ ಬೇರೆ ಬಳಕೆದಾರರು ವೀಕ್ಷಿಸುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ಕುಕೀಗಳನ್ನು ಬಳಸುತ್ತಾರೆ. ಈ ಪಾಲುದಾರರ ಕುರಿತು ಮತ್ತು ಅವರು ನಿಮ್ಮ ಮಾಹಿತಿಯನ್ನು ಹೇಗೆ ಬಳಸುತ್ತಾರೆ ಎಂಬ ಕುರಿತು ಇನ್ನಷ್ಟು ತಿಳಿಯಿರಿ.

## ನಿರ್ದಿಷ್ಟ Google ಸೇವೆಗಳು

ಉದಾಹರಣೆಗೆ, ಬ್ಲಾಗರ್‌ನಿಂದ ನಿಮ್ಮ ಬ್ಲಾಗ್ ಅನ್ನು ಅಳಿಸಬಹುದು ಅಥವಾ Google ಸೈಟ್‌ಗಳಿಂದ ನಿಮ್ಮ ಮಾಲೀಕತ್ವದ Google ಸೈಟ್ ಅನ್ನು ಅಳಿಸಬಹುದು. ನೀವು ಅಪ್ಲಿಕೇಶನ್‌ಗಳಲ್ಲಿ, ಗೇಮ್‌ಗಳಲ್ಲಿ ಮತ್ತು Play ಸ್ಟೋರ್‌ನಲ್ಲಿರುವ ಇತರ ಕಂಟೆಂಟ್‌ನಲ್ಲಿ ನಮೂದಿಸಿದ ಅಭಿಪ್ರಾಯಗಳನ್ನು ಸಹ ಅಳಿಸಬಹುದು.

## ಪಾವತಿ ಮಾಹಿತಿ

ಉದಾಹರಣೆಗೆ, ನಿಮ್ಮ Google ಖಾತೆಗೆ ನೀವು ಕ್ರೆಡಿಟ್ ಕಾರ್ಡ್ ಅಥವಾ ಇತರ ಪಾವತಿ ವಿಧಾನವನ್ನು ಸೇರಿಸಿದರೆ, Play ಸ್ಟೋರ್‌ನಲ್ಲಿರುವ ಅಪ್ಲಿಕೇಶನ್‌ಗಳಂತಹ ನಮ್ಮ ಸೇವೆಗಳಾದ್ಯಂತ ನಿಮಗೆ ಬೇಕಾದ್ದನ್ನು ಖರೀದಿಸಲು ನೀವು ಅದನ್ನು ಬಳಸಬಹುದು. ನಿಮ್ಮ ಪಾವತಿಯನ್ನು ಪ್ರಕ್ರಿಯೆಗೊಳಿಸುವುದಕ್ಕಾಗಿ ಸಹಾಯ ಮಾಡಲು ನಾವು ವ್ಯಾಪಾರದ ತೆರಿಗೆ ಐಡಿಯಂತಹ ಇತರ ಮಾಹಿತಿಯನ್ನು ಸಹ ಕೇಳಬಹುದು. ಕೆಲವೊಂದು ಸಂದರ್ಭಗಳಲ್ಲಿ, ನಾವು ನಿಮ್ಮ ಗುರುತನ್ನು ಪರಿಶೀಲಿಸಬೇಕಾಗಬಹುದು ಮತ್ತು ಇದಕ್ಕಾಗಿ ನಾವು ನಿಮ್ಮಿಂದ ಮಾಹಿತಿಯನ್ನು ವಿನಂತಿಸಬಹುದು.

ಒಂದು ವೇಳೆ ನಿಮಗೆ Google ಖಾತೆಯನ್ನು ಹೊಂದುವಷ್ಟು ವಯಸ್ಸು ಆಗಿಲ್ಲ ಎಂಬುದನ್ನು ಸೂಚಿಸುವ ತಪ್ಪು ಜನ್ಮ ದಿನಾಂಕವನ್ನು ನೀವು ನಮೂದಿಸಿದರೆ, ನೀವು ವಯೋಮಿತಿಯ ಆವಶ್ಯಕತೆಗಳನ್ನು ಪೂರೈಸುತ್ತೀರಾ ಎಂದು ನೋಡಲು ಸಹ ನಾವು ಪಾವತಿ ಮಾಹಿತಿಯನ್ನು ಬಳಸಬಹುದು. ಇನ್ನಷ್ಟು ತಿಳಿಯಿರಿ

## ಫೋನ್ ಸಂಖ್ಯೆ

ನಿಮ್ಮ ಖಾತೆಗೆ ನೀವು ಫೋನ್ ಸಂಖ್ಯೆಯನ್ನು ಸೇರಿಸಿದರೆ, ನಿಮ್ಮ ಸೆಟ್ಟಿಂಗ್‌ಗಳನ್ನು ಆಧರಿಸಿ Google ಸೇವೆಗಳಾದ್ಯಂತ ಅದನ್ನು ಬೇರೆ ಬೇರೆ ಉದ್ದೇಶಗಳಿಗಾಗಿ ಬಳಸಬಹುದು. ಉದಾಹರಣೆಗೆ, ನಿಮಗೆ ಪಾಸ್‌ವರ್ಡ್ ಮರೆತುಹೋದರೆ ನಿಮ್ಮ ಖಾತೆಗೆ ಪ್ರವೇಶ ಪಡೆಯುವುದಕ್ಕಾಗಿ ನಿಮಗೆ ಸಹಾಯ ಮಾಡಲು, ಜನರು ನಿಮ್ಮನ್ನು ಹುಡುಕಲು ಮತ್ತು ಸಂಪರ್ಕಿಸಲು ಮತ್ತು ನೀವು ನೋಡುವ ಜಾಹೀರಾತುಗಳು ನಿಮಗೆ ಹೆಚ್ಚು ಸೂಕ್ತವಾಗಿರುವಂತೆ ಮಾಡಲು ನಿಮ್ಮ ಫೋನ್ ಸಂಖ್ಯೆಯನ್ನು ಬಳಸಬಹುದು. ಇನ್ನಷ್ಟು ತಿಳಿಯಿರಿ

## ಮಾಹಿತಿಯನ್ನು ಲಿಂಕ್ ಮಾಡಬಹುದು

Google Analytics ಮೊದಲ ಪಾರ್ಟಿಯ ಕುಕೀಗಳನ್ನು ಅವಲಂಬಿಸುತ್ತದೆ, ಅಂದರೆ Google Analytics ಗ್ರಾಹಕರು ಕುಕೀಗಳನ್ನು ಹೊಂದಿಸುತ್ತಾರೆ. Google Analytics ಮೂಲಕ ಉತ್ಪತ್ತಿಯಾಗುವ ಡೇಟಾವನ್ನು ನಮ್ಮ ಸಿಸ್ಟಂಗಳ ಮೂಲಕ, ಇತರ ವೆಬ್‌ಸೈಟ್‌ಗಳಿಗೆ ನೀಡುವ ಭೇಟಿಗಳಿಗೆ ಸಂಬಂಧಿಸಿದ ಥರ್ಡ್-ಪಾರ್ಟಿ ಕುಕೀಗಳಿಗೆ Google Analytics ಗ್ರಾಹಕರು ಅಥವಾ Google ಲಿಂಕ್ ಮಾಡಬಹುದು. ಉದಾಹರಣೆಗೆ, ಹೆಚ್ಚು ಸೂಕ್ತವಾದ ಜಾಹೀರಾತುಗಳನ್ನು ರಚಿಸಲು ಅಥವಾ ತನ್ನ ಸೈಟ್‌ಗಳಲ್ಲಿನ ಟ್ರಾಫಿಕ್ ಅನ್ನು ಹೆಚ್ಚು ವಿಶ್ಲೇಷಿಸಲು ಜಾಹೀರಾತುದಾರರು ತಮ್ಮ Google Analytics ಡೇಟಾವನ್ನು ಬಳಸಲು ಬಯಸಬಹುದು. ಇನ್ನಷ್ಟು ತಿಳಿಯಿರಿ

## ವಿಶ್ವಾದ್ಯಂತದ ಸರ್ವರ್‌ಗಳು

ಉದಾಹರಣೆಗೆ, ಬಳಕೆದರರಿಗಾಗಿ ನಮ್ಮ ಉತ್ಪನ್ನಗಳು ನಿರಂತರವಾಗಿ ಲಭ್ಯವಾಗುವಂತೆ ಮಾಡಲು, ನಾವು ವಿಶ್ವಾದ್ಯಂತ ಡೇಟಾ ಕೇಂದ್ರಗಳನ್ನು ಕಾರ್ಯಾಚರಿಸುತ್ತೇವೆ.

## ವಿಷಯ ಮತ್ತು ಜಾಹೀರಾತುಗಳ ವೀಕ್ಷಣೆಗಳು ಮತ್ತು ಅವುಗಳೊಂದಿಗಿನ ಸಂವಹನಗಳು

ಉದಾಹರಣೆಗೆ, ಜಾಹೀರಾತುಗಳ ವೀಕ್ಷಣೆ ಮತ್ತು ಸಂವಹನಗಳ ಕುರಿತಾದ ಮಾಹಿತಿಯನ್ನು ನಾವು ಸಂಗ್ರಹಿಸುತ್ತೇವೆ ಮತ್ತು ಈ ಮೂಲಕ ನಾವು ಜಾಹೀರಾತುದಾರರಿಗೆ ಕ್ರೋಢೀಕೃತ ಮಾಹಿತಿಯನ್ನು ಒದಗಿಸಲು ಸಾಧ್ಯವಾಗುತ್ತದೆ. ಉದಾಹರಣೆಗೆ, ನಾವು ಅವರ ಜಾಹೀರಾತನ್ನು ಪುಟದಲ್ಲಿ ತೋರಿಸಿದ್ದೇವೆಯೇ ಮತ್ತು ವೀಕ್ಷಕರು ಆ ಜಾಹೀರಾತನ್ನು ನೋಡಿರುವ ಸಂಭಾವ್ಯತೆ ಇದೆಯೇ ಎಂಬ ಕುರಿತಾದ ಮಾಹಿತಿ. ನೀವು ಜಾಹೀರಾತಿನ ಮೇಲೆ ಮೌಸ್ ಅನ್ನು ಹೇಗೆ ಸರಿಸುತ್ತೀರಿ ಅಥವಾ ನೀವು ಜಾಹೀರಾತು ಕಾಣಿಸಿಕೊಳ್ಳುವ ಪುಟದೊಂದಿಗೆ ಯಾವುದೇ ಸಂವಹನವನ್ನು ನಡೆಸುತ್ತೀರಾ ಎಂಬುದಕ್ಕೆ ಸಂಬಂಧಿಸಿದ ಇತರ ಸಂವಹನಗಳನ್ನು ಸಹ ನಾವು ಮಾಪನ ಮಾಡಬಹುದು.

## ವೈಯಕ್ತೀಕರಿಸಿದ ಜಾಹೀರಾತುಗಳು

ಜಾಹೀರಾತುದಾರರು ಒದಗಿಸಿದ ಮಾಹಿತಿಯನ್ನು ಆಧರಿಸಿ ನೀವು ವೈಯಕ್ತೀಕರಿಸಿದ ಜಾಹೀರಾತುಗಳನ್ನು ಸಹ ನೋಡಬಹುದು. ನೀವು ಜಾಹೀರಾತುದಾರರ ವೆಬ್‌ಸೈಟ್‌ನಲ್ಲಿ ಶಾಪಿಂಗ್ ಮಾಡಿದರೆ, ಉದಾಹರಣೆಗೆ, ನಿಮಗೆ ಜಾಹೀರಾತುಗಳನ್ನು ತೋರಿಸಲು ಅವರು ನಿಮ್ಮ ಭೇಟಿಯ ಮಾಹಿತಿಯನ್ನು ಬಳಸಬಹುದು. ಇನ್ನಷ್ಟು ತಿಳಿಯಿರಿ

## ಸರಿಯಾಗಿ ಕಾರ್ಯಾಚರಣೆ ನಡೆಸಲು ಕುಕೀಗಳ ಮೇಲೆ ಅವಲಂಬಿಸುವುದು

ಉದಾಹರಣೆಗೆ, ಒಂದೇ ಬ್ರೌಸರ್‌ನಲ್ಲಿ ಅನೇಕ Google ಡಾಕ್‌ಗಳನ್ನು ತೆರೆಯಲು ನಿಮಗೆ ಅವಕಾಶ ಮಾಡಿಕೊಡುವಂತಹ ‘lbcs’ ಎಂದು ಕರೆಯುವ ಒಂದು ಕುಕೀಯನ್ನು ನಾವು ಬಳಸುತ್ತೇವೆ. ಈ ಕುಕೀಯನ್ನು ನಿರ್ಬಂಧಿಸಿದರೆ, Google ಡಾಕ್ಸ್ ನಿರೀಕ್ಷೆಯಂತೆ ಕೆಲಸ ಮಾಡದಿರಬಹುದು. ಇನ್ನಷ್ಟು ತಿಳಿಯಿರಿ

## ಸಾಧನಗಳು

ಉದಾಹರಣೆಗೆ, ನೀವು Google Play ನಿಂದ ಖರೀದಿಸುವ ಅಪ್ಲಿಕೇಶನ್ ಅನ್ನು ಇನ್‌ಸ್ಟಾಲ್ ಮಾಡಲು ಅಥವಾ ಚಲನಚಿತ್ರವನ್ನು ವೀಕ್ಷಿಸಲು ನೀವು ಯಾವ ಸಾಧನವನ್ನು ಬಳಸಲು ಬಯಸುತ್ತೀರಿ ಎನ್ನುವುದನ್ನು ನಿರ್ಧರಿಸುವಲ್ಲಿ ನಿಮಗೆ ಸಹಾಯ ಮಾಡಲು ನಿಮ್ಮ ಸಾಧನಗಳ ಮಾಹಿತಿಯನ್ನು ನಾವು ಬಳಸಬಹುದು. ನಿಮ್ಮ ಖಾತೆಯನ್ನು ಸಂರಕ್ಷಿಸಲು ಸಹಾಯ ಮಾಡಲು ಕೂಡಾ ನಾವು ಈ ಮಾಹಿತಿಯನ್ನು ಬಳಸುತ್ತೇವೆ.

## ಸಾರ್ವಜನಿಕವಾಗಿ ಪ್ರವೇಶಿಸಬಹುದಾದ ಮೂಲಗಳು

ಉದಾಹರಣೆಗೆ, ಆನ್‌ಲೈನ್‌ನಲ್ಲಿ ಅಥವಾ ಇತರ ಸಾರ್ವಜನಿಕ ಮೂಲಗಳಲ್ಲಿ ಸಾರ್ವಜನಿಕವಾಗಿ ಲಭ್ಯವಿರುವ ಮಾಹಿತಿಯನ್ನು ನಾವು ಸಂಗ್ರಹಿಸಬಹುದು. Google ನ ಭಾಷಾ ಮಾದರಿಗಳಿಗೆ ತರಬೇತಿ ನೀಡಲು ಮತ್ತು Google ಅನುವಾದದಂತಹ ವೈಶಿಷ್ಟ್ಯಗಳನ್ನು

ನಿರ್ಮಿಸಲು ನಾವು ಇವುಗಳನ್ನು ಬಳಸಬಹುದು.

## ಸುಧಾರಣೆಗಳನ್ನು ಮಾಡಲು

ಉದಾಹರಣೆಗೆ, ಜನರು ನಮ್ಮ ಸೇವೆಗಳೊಂದಿಗೆ ಹೇಗೆ ಸಂವಹಿಸುತ್ತಾರೆ ಎನ್ನುವುದನ್ನು ವಿಶ್ಲೇಷಿಸಲು ನಾವು ಕುಕೀಗಳನ್ನು ಬಳಸುತ್ತೇವೆ. ಮತ್ತು ಆ ವಿಶ್ಲೇಷಣೆಯು, ಇನ್ನಷ್ಟು ಉತ್ತಮವಾದ ಉತ್ಪನ್ನಗಳನ್ನು ನಿರ್ಮಿಸಲು ನಮಗೆ ಸಹಾಯ ಮಾಡಬಹುದು. ಉದಾಹರಣೆಗೆ, ನಿರ್ದಿಷ್ಟ ಕಾರ್ಯವೊಂದನ್ನು ಪೂರೈಸಲು ಜನರು ತುಂಬಾ ಸಮಯ ವ್ಯಯಿಸಬೇಕಾಗುತ್ತದೆ ಅಥವಾ ಕಾರ್ಯದ ಹಂತಗಳನ್ನು ಪೂರ್ತಿಗೊಳಿಸಲು ಅವರಿಗೆ ಸಮಸ್ಯೆಯಾಗುತ್ತಿದೆ ಎಂಬುದನ್ನು ನಾವು ತಿಳಿದುಕೊಳ್ಳಬಹುದು. ಆನಂತರ, ನಾವು ಆ ವೈಶಿಷ್ಟ್ಯವನ್ನು ಮರುವಿನ್ಯಾಸಗೊಳಿಸಬಹುದು ಮತ್ತು ಉತ್ಪನ್ನವನ್ನು ಎಲ್ಲರಿಗಾಗಿ ಉತ್ತಮಗೊಳಿಸಬಹುದು.

## ಸುರಕ್ಷತೆ ಮತ್ತು ವಿಶ್ವಾಸಾರ್ಹತೆ

ನಮ್ಮ ಸೇವೆಗಳನ್ನು ಸುರಕ್ಷಿತ ಮತ್ತು ವಿಶ್ವಾಸಾರ್ಹವಾಗಿರಿಸಲು, ನಿಮ್ಮ ಮಾಹಿತಿಯನ್ನು ನಾವು ಹೇಗೆ ಬಳಸುತ್ತೇವೆ ಎಂಬುದಕ್ಕೆ ಕೆಲವು ಉದಾಹರಣೆಗಳು ಹೀಗಿವೆ:

- ಸ್ವಯಂಚಾಲಿತ ದುರ್ಬಳಕೆಯ ವಿರುದ್ಧ ಸಂರಕ್ಷಣೆ ಒದಗಿಸಲು, IP ವಿಳಾಸಗಳು ಮತ್ತು ಕುಕೀ ಡೇಟಾವನ್ನು ಸಂಗ್ರಹಿಸುವುದು ಹಾಗೂ ವಿಶ್ಲೇಷಿಸುವುದು. ಈ ದುರುಪಯೋಗವು Gmail ಬಳಕೆದಾರರಿಗೆ ಸ್ಪ್ಯಾಮ್ ಕಳುಹಿಸುವುದು, ಜಾಹೀರಾತುಗಳ ಮೇಲೆ ವಂಚನೆಯಿಂದ ಕ್ಲಿಕ್ ಮಾಡುವ ಮೂಲಕ ಜಾಹೀರಾತುದಾರರಿಂದ ಹಣ ಕದಿಯುವುದು ಅಥವಾ ಸೇವಾ ವಿತರಣೆ ನಿರಾಕರಣೆ (DDoS) ದಾಳಿಯನ್ನು ಪ್ರಾರಂಭಿಸುವ ಮೂಲಕ ವಿಷಯವನ್ನು ಸೆನ್ಸಾರ್ ಮಾಡುವಂತಹ ಹಲವಾರು ರೂಪಗಳಲ್ಲಿರುತ್ತದೆ.
- Gmail ನಲ್ಲಿನ “ಖಾತೆಯ ಕೊನೆಯ ಚಟುವಟಿಕೆ” ವೈಶಿಷ್ಟ್ಯವು, ನಿಮ್ಮ ಅರಿವಿಲ್ಲದೆ ಬೇರೆ ಯಾರಾದರೂ ನಿಮ್ಮ ಇಮೇಲ್‌ಗೆ ಪ್ರವೇಶಿಸಿದ್ದಾರೆಯೇ ಎಂಬುದನ್ನು ಕಂಡುಹಿಡಿಯಲು ಸಹಾಯ ಮಾಡಬಹುದು. ಈ ವೈಶಿಷ್ಟ್ಯವು Gmail ನಲ್ಲಿನ ಇತ್ತೀಚಿನ ಚಟುವಟಿಕೆಯ ಕುರಿತು ಮಾಹಿತಿಯನ್ನು ತೋರಿಸುತ್ತದೆ. ಉದಾಹರಣೆಗೆ, ನಿಮ್ಮ ಮೇಲ್ ಅನ್ನು ಪ್ರವೇಶಿಸಿದ IP ವಿಳಾಸ, ಸಂಬಂಧಿತ ಸ್ಥಳ ಮತ್ತು ಪ್ರವೇಶದ ದಿನಾಂಕ ಮತ್ತು ಸಮಯ. ಇನ್ನಷ್ಟು ತಿಳಿಯಿರಿ

## ಸೂಕ್ತ ರಕ್ಷಣಾ ಕ್ರಮಗಳು

ಉದಾಹರಣೆಗೆ, ನಿಮ್ಮ ಕುರಿತಾದ ಇತರ ಮಾಹಿತಿಯೊಂದಿಗೆ ಡೇಟಾವನ್ನು ಲಿಂಕ್ ಮಾಡಲು ಸಾಧ್ಯವಾಗದಂತೆ ನಾವು ಡೇಟಾವನ್ನು ಅನಾಮಧೇಯಗೊಳಿಸಬಹುದು ಅಥವಾ ಎನ್‌ಕ್ರಿಪ್ಟ್ ಮಾಡಬಹುದು. ಇನ್ನಷ್ಟು ತಿಳಿಯಿರಿ

## ಸೂಕ್ಷ್ಮ ವರ್ಗಗಳು

ವೈಯಕ್ತೀಕರಿಸಿದ ಜಾಹೀರಾತುಗಳನ್ನು ನಿಮಗೆ ತೋರಿಸುವಾಗ, ನಿಮ್ಮ ಚಟುವಟಿಕೆಯ ಆಧಾರದಲ್ಲಿ ನಿಮಗೆ ಆಸಕ್ತಿ ಇರಬಹುದು ಎಂದು ನಾವು ಭಾವಿಸುವ ವಿಷಯಗಳನ್ನು ನಾವು ಬಳಸಿಕೊಳ್ಳುತ್ತೇವೆ. ಉದಾಹರಣೆಗೆ, "ಅಡುಗೆ ಮತ್ತು ರೆಸಿಪಿಗಳು" ಅಥವಾ "ವಿಮಾನ ಪ್ರಯಾಣ” ಎಂಬಂತಹ ವಿಷಯಗಳ ಜಾಹೀರಾತುಗಳನ್ನು ನೀವು ನೋಡಬಹುದು. ಜನಾಂಗ,ಧರ್ಮ, ಲೈಂಗಿಕ ಅಭಿರುಚಿ ಅಥವಾ ಆರೋಗ್ಯದಂಥ ಸೂಕ್ಷ್ಮ ವರ್ಗಗಳ ವಿಷಯಗಳನ್ನು ನಾವು ಬಳಸುವುದಿಲ್ಲ ಅಥವಾ ಅವುಗಳನ್ನು ಆಧರಿಸಿ ವೈಯಕ್ತೀಕರಿಸಿದ ಜಾಹೀರಾತುಗಳನ್ನು ತೋರಿಸುವುದಿಲ್ಲ. ಮತ್ತು ನಮ್ಮ ಸೇವೆಗಳನ್ನು ಬಳಸುವ ಜಾಹೀರಾತುದಾರರಿಂದಲೂ ನಾವು ಇದನ್ನೇ ಅಪೇಕ್ಷಿಸುತ್ತೇವೆ.

## Google ಅಪ್ಲಿಕೇಶನ್‌ಗಳನ್ನು ಹೊಂದಿರುವ Android ಸಾಧನ

Google ಅಪ್ಲಿಕೇಶನ್‌ಗಳನ್ನು ಹೊಂದಿರುವ Android ಸಾಧನಗಳಲ್ಲಿ, Google ಅಥವಾ ನಮ್ಮ ಪಾಲುದಾರರು ಮಾರಾಟ ಮಾಡಿರುವ ಸಾಧನಗಳು ಸೇರಿರುತ್ತವೆ ಮತ್ತು ಫೋನ್‌ಗಳು, ಕ್ಯಾಮರಾಗಳು, ವಾಹನಗಳು. ಧರಿಸುವಂಥವುಗಳು ಮತ್ತು ಟೆಲಿವಿಷನ್‌ಗಳು ಸೇರಿರುತ್ತವೆ. ಈ ಸಾಧನಗಳು, Google Play ಸೇವೆಗಳು ಮತ್ತು Gmail, ನಕ್ಷೆಗಳು, ನಿಮ್ಮ ಫೋನ್‌ನ ಕ್ಯಾಮರಾ ಮತ್ತು ಫೋನ್ ಡಯಲರ್, ಪಠ್ಯದಿಂದ ಧ್ವನಿಗೆ ಪರಿವರ್ತನೆ, ಕೀಬೋರ್ಡ್ ಇನ್‌ಪುಟ್ ಮತ್ತು ಸುರಕ್ಷತಾ ವೈಶಿಷ್ಟ್ಯಗಳಂತಹ ಸೇವೆಗಳನ್ನು ಒಳಗೊಂಡಿರುವ, ಮೊದಲೇ ಇನ್‌ಸ್ಟಾಲ್ ಮಾಡಿರುವ ಇತರ ಅಪ್ಲಿಕೇಶನ್‌ಗಳನ್ನು ಬಳಸುತ್ತವೆ.

## Google ನ ಪಾಲುದಾರರಾಗಿ

ಜಾಹೀರಾತುಗಳನ್ನು ತೋರಿಸುವುದಕ್ಕಾಗಿ 2 ಮಿಲಿಯನ್‌ಗೂ ಹೆಚ್ಚು Google ಅಲ್ಲದ ವೆಬ್‌ಸೈಟ್‌ಗಳು ಮತ್ತು ಅಪ್ಲಿಕೇಶನ್‌ಗಳು Google ನ ಪಾಲುದಾರರಾಗಿವೆ. ಇನ್ನಷ್ಟು ತಿಳಿಯಿರಿ